ಉಪನ್ಯಾಸ
ಗ್ರಂಥಮಾಲೆ

೧೨೧

ಸಾಮಾಜಿಕ ಭದ್ರತೆ

ಎಚ್. ವಿ. ನಾಗೇಶ್, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಏಪ್ರಿಲ್, ೧೯೭೧

ಉಪನ್ಯಾಸ ಗ್ರಂಥಮಾಲೆ

೧೨೧

ಸಾಮಾಜಿಕ ಭದ್ರತೆ

(SOCIAL SECURITY)

ಎಚ್. ವಿ. ನಾಗೇಶ್, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಏಪ್ರಿಲ್, ೧೯೭೧

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್.ಬಿ.
ರಜಿಸ್ಟ್ರಾರ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಪ್ರಥಮ ಮುದ್ರಣ : ಎಪ್ರಿಲ್, ೧೯೭೧
೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು :

ಗೋಪಾಲ ಜೋಶಿ
ಗ್ರಂಥ ಮುದ್ರಣ,
ಮಂಗಳವಾರ ಪೇಟೆ,
ಧಾರವಾಡ – ೧

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೧೨೦ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು-ನಾಲ್ಕು ಮುದ್ರಣಗಳನ್ನೂ ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೫-೪-೧೯೭೧

ಎ. ಎಸ್. ಅಡಕೆ
ಕುಲಪತಿ

ಕೃತಜ್ಞತೆಗಳು

ನಾನು ಈ ಹಿಂದೆ ಮುಳಗುಂದದಲ್ಲಿ ವಿಶ್ವವಿದ್ಯಾಲಯದವರು ಏರ್ಪಡಿಸಿದ ವ್ಯಾಸಂಗ ವಿಸ್ತರಣ ಶಿಬಿರದಲ್ಲಿ ಭಾಗವಹಿಸಿದ್ದೆ. ಅಲ್ಲಿ ಮಾಡಿದ ಉಪನ್ಯಾಸವನ್ನೇ ಇಲ್ಲಿ ಚಿಕ್ಕ ಹೊತ್ತಿಗೆಯಾಗಿ ತಂದಿದ್ದೇನೆ. ಈ ಸಂದರ್ಭದಲ್ಲಿ ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀಮಾನ್ ಚನ್ನವೀರ ಕಣವಿಯವರನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಎಂಟು-ಹತ್ತು ಜ್ಞಾಪನ ಪತ್ರಗಳನ್ನು ಛೂ ಬಿಟ್ಟು, ಅಲಸಿಕೆಯಿಲ್ಲದೆ, ಸಹನೆಗೆಡದೆ, ಚಾಕಚಕ್ಯತೆಯಿಂದ ಬರಹಗಳನ್ನು ಪಡೆಯುವ ಅವರ ಬಗೆಗೆ ಗೌರವವನ್ನು ಸೂಚಿಸಿ, ಈ ಅವಕಾಶವನ್ನು ಒದಗಿಸಿಕೊಟ್ಟ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜೆ. ಎಸ್. ಎಸ್. ಆರ್ಟ್ಸ್ ಕಾಲೇಜು
ವಿದ್ಯಾಗಿರಿ, ಧಾರವಾಡ-೧
೧೮-೩-೧೯೭೧

ಎಚ್. ವಿ. ನಾಗೇಶ್

ವಿಷಯ ಸೂಚಿ

ಅಧ್ಯಾಯ ೧ : ಸಾಮಾಜಿಕ ಭದ್ರತೆ ಎಂದರೇನು? – ಒಂದು ವ್ಯಾಖ್ಯೆ – ಸಮಾಜ ಕಲ್ಯಾಣ, ಸಾಮಾಜಿಕ ಭದ್ರತೆ ಮತ್ತು ಸಮಾಜ ಸಂರಕ್ಷಣೆ – ಭದ್ರತೆಯ ಕಾರಣಗಳು. (ಪು. ೧)

ಅಧ್ಯಾಯ ೨ : ಪ್ರಾಚೀನ ಭದ್ರತಾ ವ್ಯವಸ್ಥೆ – ಕುಂದುಕೊರತೆಗಳು (ಪು. ೮)

ಅಧ್ಯಾಯ ೩ : ಆಧುನಿಕ ಕಾಲ – ವ್ಯವಸ್ಥಿತವಾಗಲು ಕಾರಣಗಳು ಹೊಸ ಉಪಾಯಗಳು. (ಪು. ೧೨)

ಅಧ್ಯಾಯ ೪ : ಸಾಮಾಜಿಕ ಭದ್ರತೆಯ ಪ್ರಚಲಿತ ಮಾರ್ಗಗಳು ಸಾಮಾಜಿಕ ಸಹಾಯ – ಸಾಮಾಜಿಕ ವಿಮೆ. (ಪು. ೧೬)

ಅಧ್ಯಾಯ ೫ : ಸಮಾಜ ಸುಭದ್ರತೆಯ ಸುತ್ತುನೋಟ–ಬ್ರಿಟನ್ ಅಮೇರಿಕಾ, ಕೆನಡಾ, ಹಾಲಂಡ್, ಸೋವಿಯಟ್ ರಷ್ಯಾ, ಜನತಾ ಚೀಣಾ. (ಪು. ೨೧)

ಅಧ್ಯಾಯ ೬ : ವಿಶ್ವಸಂಸ್ಥೆ ಮತ್ತು ಸಾಮಾಜಿಕ ಭದ್ರತೆ (ಪು. ೨೯)

ಅಧ್ಯಾಯ ೭ : ಭಾರತದಲ್ಲಿ ಸಾಮಾಜಿಕ ಭದ್ರತೆಯ ಬೆಳವಣಿಗೆ – ಬೆಳವಣಿಗೆಯ ಹಂತಗಳು – ಪ್ರಾರಂಭಕಾಲ – ಚಳುವಳಿಯ ಕಾಲ – ಯೋಜನೆಯ ಕಾಲ – ಚಟುವಟಿಕೆಯ ಕಾಲ.

(ಪು. ೩೫)

ಅಧ್ಯಾಯ ೮ : ಈಚೆಯ ಎರಡು ದಶಕಗಳು – ನೌಕರರ ರಾಜ್ಯ ವಿಮಾ ಯೋಜನೆ – ಕಲ್ಲಿದ್ದಲು ಗಣಿ ನೌಕರರ ಕ್ಷೇಮನಿಧಿ – ನೌಕರರ ಕ್ಷೇಮ ನಿಧಿ – ಮಾತೃತ್ವದ ಸೌಲಭ್ಯಗಳು – ಪಿಂಚಣಿ ಯೋಜನೆಗಳು – ಸಾರ್ವಜನಿಕ ಕ್ಷೇಮನಿಧಿ – ಬರಲೇಬೇಕಾದ ಒಂದು ಮಹತ್ವದ ಯೋಜನೆ – ನಿರುದ್ಯೋಗ ವಿಮೆ – ಬರಬಹುದಾದ ಯೋಜನೆಗಳು – ನಮಗೆ ಭದ್ರತೆ ಇದೆಯೆ?

(ಪು. ೪೩)

—o—

ಸಾಮಾಜಿಕ ಭದ್ರತೆ

[Social Security]

ಅಧ್ಯಾಯ – ೧

ಸಾಮಾಜಿಕ ಭದ್ರತೆ ಎಂದರೇನು?

ಮನುಷ್ಯನಿಗೆ ತನ್ನ ಜೀವನವು ಸುಭದ್ರವಾಗಿರಬೇಕೆಂಬ ಉತ್ಕಟವಾದ ಮತ್ತು ನಿರಂತರವಾದ ಬಯಕೆ ಇದ್ದೇ ಇರುತ್ತದೆ. ಆದರೂ ಹುಟ್ಟಿನಿಂದ ಸಾವಿನ ವರೆಗೆ ಅವನು ಅನೇಕ ಆಕಸ್ಮಿಕಗಳನ್ನು, ವಿಪತ್ತುಗಳನ್ನು ಎದುರಿಸಬೇಕಾಗುತ್ತದೆ. ಕಾಹಿಲೆಗೆ ತುತ್ತಾಗುವುದು ತೀರ ಸಾಮಾನ್ಯವಾದ ಆಪತ್ತು. ಆಗ ಸಂಪಾದನೆ ನಿಲ್ಲುತ್ತದೆ. ಶುಶ್ರೂಷೆಗೆಂದು ಹಣ ಸೂರೆಯಾಗುತ್ತದೆ. ಹಾಗೆಯೇ, ದುಡಿಯುವ ತಾಯಿಯು ಬಸಿರಾದಾಗ ಮತ್ತು ಬಾಣಂತಿತನದ ದಿನಗಳಲ್ಲಿ ದುಡಿಯಲಾರಳು. ಆಗ ಕುಟುಂಬದ ಆದಾಯ ಕುಗ್ಗುತ್ತದೆ ವೃದ್ಧಾಪ್ಯ ಬಂದಾಗಲೂ ಹೀಗೆಯೇ. ಅದೇ ರೀತಿಯಲ್ಲಿ ಕುಟುಂಬದ ಯಜಮಾನನು ಅಥವಾ ಸಂಪಾದಿಸುವವನು ಸತ್ತಾಗ ಕುಟುಂಬದ ಜನರು ನಿರ್ಗತಿಕರಾಗುತ್ತಾರೆ. ಉದ್ಯೋಗದಲ್ಲಿದ್ದ

ಕೆಲಸಗಾರರು ಗಾಯಗೊಂಡೋ, ಊನಗೊಂಡೋ, ಅಂಗವಿಕಲರಾಗಿಯೋ ದುಡಿಮೆಗೆ ಅಯೋಗ್ಯರಾಗಬಹುದು. ಔದ್ಯೋಗಿಕ ಕಾಹಿಲೆ, ದೈಹಿಕ ಅಸಮರ್ಥತೆ, ಉದ್ಯೋಗ ಕಳೆದುಕೊಳ್ಳುವುದು, ಉದ್ಯೋಗ ಸಿಗದೇ ಇರುವುದು, ಮನೆ ಮಠ ಕಳೆದುಕೊಳ್ಳುವುದು, ಅನಾಥರಾಗುವುದು ಹೀಗೆ ನಾನಾ ತರದ ಸನ್ನಿವೇಶಗಳು ವ್ಯಕ್ತಿಯ ಜೀವನವನ್ನು ತಲ್ಲಣಗೊಳಿಸುತ್ತವೆ.

ಇಂತಹ ಸಂದರ್ಭಗಳಲ್ಲೆಲ್ಲ ವ್ಯಕ್ತಿಯು ಒಬ್ಬಂಟಿಗನಾಗಿ ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆಗ ಅವನ ಕುಟುಂಬವಾಗಲೀ, ಆಪ್ತೇಷ್ಟರು ಅಥವಾ ಬಂಧುಗಳಾಗಲೀ ಸಹಾಯಕ್ಕೆ ಬರಬಹುದು. ಆದರೆ ಅನೇಕ ಸಂದರ್ಭಗಳಲ್ಲಿ ಅವರು ಕೂಡ ಆ ಗಂಡಾಂತರಗಳನ್ನು ನಿವಾರಿಸಲಾರರು. ಆಗ ಇಡಿಯ ಸಮುದಾಯವಾಗಲೀ, ಜಾತಿ, ಶ್ರೇಣಿ, ವರ್ಗ ಅಥವಾ ಸರಕಾರಗಳಾಗಲೀ ಅವನ ರಕ್ಷಣೆಗೆ ಬರುವುದುಂಟು. ಈ ರಕ್ಷಣೆ ಬೇರೆ ಬೇರೆ ರೀತಿಗಳಲ್ಲಿ ಸಿಗಬಹುದು. ಹಿಂದಿನ ಕಾಲದಲ್ಲಿ ಅರಸರು ದಾನ, ಸಹಾಯಧನ, ವರ್ಷಾಶನ ಎಂಬಿತ್ಯಾದಿ ರೂಪಗಳಲ್ಲಿ ಸಹಾಯ ಮಾಡುತ್ತಿದ್ದರು. ಹಾಗೆಯೇ, ಶ್ರೇಣಿಗಳು ಮತ್ತು ಪಂಚಾಯತಗಳು ವಂತಿಗೆಯನ್ನು ಕೊಡುತ್ತಿದ್ದವು. ಶಿಷ್ಯವೃತ್ತಿಗಳೂ, ಪುಕ್ಕಟೆ ಸೌಲಭ್ಯಗಳೂ, ವಿನಾಯತಿಗಳೂ ಇದ್ದವು. ಈಗಿನ ಸರಕಾರಗಳು ಹಾಗೂ ಔದ್ಯೋಗಿಕ ಸಂಸ್ಥೆಗಳು ಪಿಂಚಣಿ, ಕ್ಷೇಮನಿಧಿ, ಪರಿಹಾರ, ಸಹಾಯಧನ, ವಿಮಾಯೋಜನೆಗಳೆಂದು ಹಲವು ವಿಧಾನಗಳಿಂದ ಸಂತ್ರಸ್ತರಿಗೆ ಸಹಾಯವನ್ನು ಸಲ್ಲಿಸುತ್ತವೆ. ಹೀಗೆ ಅಭದ್ರಸ್ಥಿತಿಯಲ್ಲಿರುವ ಅಥವಾ ಸಂಕಟವನ್ನು ಎದುರಿಸುತ್ತಿರುವ

ವ್ಯಕ್ತಿಗೆ ರಾಷ್ಟ್ರವಾಗಲೀ, ಇನ್ನಾವುದಾದರೂ ಸಂಘ-ಸಂಸ್ಥೆಯಾಗಲೀ ಕೊಡುವ ರಕ್ಷಣೆಯನ್ನು ಸಾಮಾಜಿಕ ಭದ್ರತೆ ಎಂದು ಕರೆಯುತ್ತೇವೆ.

ಒಂದು ವ್ಯಾಖ್ಯೆ :

ಒಂದು ವ್ಯಾಖ್ಯೆಯೇ ಬೇಕಿದ್ದರೆ ನಾವು ಹೀಗೆನ್ನಬಹುದು: ಕೆಲವೊಂದು ಗಂಡಾಂತರಗಳನ್ನು ಎದುರಿಸುತ್ತಿರುವ ವ್ಯಕ್ತಿಗಳಿಗೆ ಸಮಾಜವು ಅಥವಾ ರಾಷ್ಟ್ರವು ವ್ಯವಸ್ಥಿತವಾಗಿ ನೀಡುವ ರಕ್ಷಣೆ ಅಥವಾ ಭದ್ರತೆಯೇ ಸಾಮಾಜಿಕ ಭದ್ರತೆ. ಈ ಗಂಡಾಂತರಗಳನ್ನು ಮಿತಸಂಪತ್ತಿಯ ವ್ಯಕ್ತಿಯು ಏಕಾಂಗಿಯಾಗಿ ಎದುರಿಸಲಾಗುವುದಿಲ್ಲ. ನಾಲ್ಕೆಂಟು ಜನರ ಸಹಾಯದಿಂದಲೂ ಅದು ದುಸ್ಸಾಧ್ಯವಿರಬಹುದು. ಅನಾರೋಗ್ಯ, ಹೆರಿಗೆ – ಬಾಣಂತಿತನ, ದೇಹದೌರ್ಬಲ್ಯ, ವೃದ್ಧಾಪ್ಯ, ಸಾವು ಇವು ಇಂತಹ ಕೇಡುಗಳು. ಇವುಗಳನ್ನು ಪ್ರತಿಬಂಧಿಸುವ, ಇಲ್ಲವೆ ನಿವಾರಿಸುವ, ಅಥವಾ ಹಗುರಗೊಳಿಸುವ ಕಾರ್ಯಕ್ರಮಗಳನ್ನು ಮಾತ್ರ ನಾವು ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳೆನ್ನಬೇಕು.

ಸಾಮಾಜಿಕ ಭದ್ರತೆಯ ಆಧುನಿಕ ಅಧ್ವರ್ಯುಗಳಾದ ಸರ್ ವಿಲಿಯಮ್ ಬೆವರಿಜ್ ಅವರ ಮಾತುಗಳಲ್ಲಿ ಹೇಳುವುದಾದರೆ ಸಾಮಾಜಿಕ ಭದ್ರತೆಯೆಂದರೆ ಪ್ರಗತಿಯನ್ನು ಅಡ್ಡಿಗೊಳಿಸುವ ಐದು ಆಸುರೀಶಕ್ತಿಗಳಾದ ಅಭಾವ, ಅನಾರೋಗ್ಯ, ಅಜ್ಞಾನ, ಅನೈರ್ಮಲ್ಯ (ಕೊಳಚೆ) ಮತ್ತು ಆಲಸೀತನ (ನಿರುದ್ಯೋಗ) ಗಳ ವಿರುದ್ಧದ ಹೋರಾಟ. ಈ ಹೋರಾಟದಲ್ಲಿ ಸರಕಾರವು ಒದಗಿಸ

ಬೇಕಾದ ಸಹಾಯವೆಂದರೆ ಇಷ್ಟೇ : "ದುಡಿಯಲು ಶಕ್ತನಿರುವಾಗ ಒಂದು ಉದ್ಯೋಗ; ಅಶಕ್ತನಿದ್ದಾಗ ಒಂದಿಷ್ಟು ಆದಾಯ."

"ಒಂದಿಷ್ಟು ಆದಾಯ"ವನ್ನು (ಅದೂ ಹಣದ ರೂಪದಲ್ಲಿ) ಕೊಡುವುದು ಸಾಮಾಜಿಕ ಭದ್ರತೆಯ ಸುಪರಿಚಿತ ರೂಪವಿದ್ದರೂ. ಸಾಮಾಜಿಕ ಭದ್ರತೆಯ ಕಲ್ಪನೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆಯಾಗಿದೆ. ಕೆಲವು ದೇಶಗಳಲ್ಲಿ ಅದು "ಆದಾಯ ರಕ್ಷಕ" ಏರ್ಪಾಟು. ಕೆಲವು ದೇಶಗಳಲ್ಲಿ ಅದರಲ್ಲಿ ಆರೋಗ್ಯ ಮತ್ತು ಸಮಾಜಕಲ್ಯಾಣಯೋಜನೆಗಳೂ ಸೇರುತ್ತವೆ. ಮತ್ತೆ ಕೆಲವು ದೇಶಗಳಲ್ಲಿ ಸಾಮಾಜಿಕ ವಿಮೆಯನ್ನಷ್ಟೇ ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳೆಂದು ಕರೆಯುತ್ತಾರೆ. ಈಗ ಹೆಚ್ಚಿನ ದೇಶಗಳಲ್ಲಿ ಸಾಮಾಜಿಕ ಭದ್ರತೆಯೆಂದರೆ ವೃದ್ಧರಿಗೆ, ನಿರುದ್ಯೋಗಿಗಳಿಗೆ, ಊನಗೊಂಡವರಿಗೆ, ಹೆರಿಗೆ-ಬಾಣಂತಿತನದಲ್ಲಿರುವ ಕೆಲಸಗಾರಳಿಗೆ, ಮುಂತಾದ ಜನರಿಗೆ ಸಿಗುವ ಆರ್ಥಿಕ ಸಹಾಯ ಎಂಬ ಅರ್ಥ ಬಳಕೆಗೆ ಬಂದಿದೆ.

ಸಾಮಾಜಿಕ ಭದ್ರತೆಯ ಕಲ್ಪನೆಯನ್ನು ಸ್ವಲ್ಪ ಹಿಗ್ಗಿಸಿದರೆ ಅದರಲ್ಲಿ ಇನ್ನೂ ಕೆಲವು ಸೌಲಭ್ಯಗಳನ್ನೂ, ಸಹಾಯವನ್ನೂ ಸೇರಿಸಬಹುದು. ಉದಾಹರಣೆಗೆ, ಕೆಲಕಾಲ ಇಂಗ್ಲೆಂಡಿನಲ್ಲಿ ಜನಪ್ರಿಯವಾಗಿದ್ದ ಬಿಸಿ ಬಿಸಿ ಊಟದ "ಸಂಚಾರಿ ಊಟದ ಗಾಡಿ"ಗಳನ್ನೂ ಇಲ್ಲಿ ಸೇರಿಸಬಹುದು. ಅಥವಾ ಮನೆಮನೆಗೆ ಹೋಗಿ ಪುಕ್ಕಟೆಯಾಗಿ ಸೇವೆ ಸಲ್ಲಿಸುವ ಸರಕಾರಿ ದಾಯಿಯರ ಸೇವೆಯನ್ನೂ ಸೇರಿಸಬಹುದು. ತಾತ್ವಿಕವಾಗಿ ಇದರಲ್ಲಿ ತಪ್ಪೇನೂ ಇಲ್ಲ. ಆದರೆ ವ್ಯಾವ

ಹಾರಿಕವಾಗಿ, ಸಾಮಾಜಿಕ ಭದ್ರತೆಯೆಂದರೆ ಸರಕಾರ ನೀಡುವ ಸಹಾಯ; ಅದು ಹೆಚ್ಚಾಗಿ ನಗದು ರೂಪದ್ದು; ಕೆಲವು ವಿಶಿಷ್ಟ ಕಾರಣಗಳಿಗಾಗಿ ಈ ಸಹಾಯ ಸಿಗುತ್ತದೆ. ಇದೇ ಸಾಮಾಜಿಕ ಭದ್ರತೆ.

ಸಮಾಜಕಲ್ಯಾಣ, ಸಾಮಾಜಿಕ ಭದ್ರತೆ ಮತ್ತು ಸಮಾಜಸಂರಕ್ಷಣೆ :

ನಮಗೆ ಪರಿಚಿತವಿರುವ ಅನೇಕ ಕಲ್ಯಾಣಕಾರಕ ಯೋಜನೆಗಳಿವ ಉದಾಹರಣೆಯೆಂದು ಹೇಳುವುದಾದರೆ, ನಮ್ಮ ಸರಕಾರವು ಕಳೆದ ಹತ್ತು-ಇಪ್ಪತ್ತು ವರ್ಷಗಳಲ್ಲಿ ಆದಿವಾಸಿಗಳ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಹಮ್ಮಿದೆ. ದೇಶದ ಬೇರೆ ಬೇರೆ ಭಾಗಗಳಲ್ಲಿರುವ ಆದಿವಾಸಿಗಳಿಗೆ ಇವುಗಳ ಲಾಭ ಮುಟ್ಟುತ್ತಿದೆ. ಹಾಗೆಯೇ ಭಾರತ ವಿಭಜನೆಯ ಕಾಲದಲ್ಲಿ ಹಾಗೂ ಅನಂತರ ಪಾಕಿಸ್ತಾನದಿಂದ ಬಂದ ಲಕ್ಷಾವಧಿ ನಿರಾಶ್ರಿತರಿಗಾಗಿ ನಮ್ಮ ಸರಕಾರವು ಪುನರ್ವಸತಿಯ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇಂತಹ ಇನ್ನೂ ಅನೇಕ ವರ್ಗಗಳು ಅಥವಾ ಜನಾಂಗಗಳು ಬೇರೆ ಬೇರೆ ಕಾರಣಗಳಿಗಾಗಿ ಸರಕಾರದ ಮತ್ತು ಸಾರ್ವಜನಿಕ ಸಂಸ್ಥೆಗಳ ಕೃಪೆಗೆ ಪಾತ್ರರಾಗಿದ್ದಾರೆ.

ಹೀಗೆ "ಸಮಾಜಕಲ್ಯಾಣ" ಎಂಬ ಶಬ್ದವನ್ನು ನಾವು ಅತಿ ವಿಶಾಲವಾದ ಅರ್ಥದಲ್ಲಿ ಬಳಸುತ್ತೇವೆ. ಇದರಲ್ಲಿ ಆದಿವಾಸಿ ಕಲ್ಯಾಣ, ನಿರಾಶ್ರಿತರು ಮತ್ತು ನಿರ್ವಾಸಿತರ ಕಲ್ಯಾಣ, ಅಲ್ಪ ಸಂಖ್ಯಾಕರ ಕಲ್ಯಾಣ, ಹಿಂದುಳಿದ ಜನಾಂಗಗಳ ಕಲ್ಯಾಣ ಇವೆಲ್ಲವೂ

ಸೇರಿವೆ. ನಮಗೆಲ್ಲ ತಿಳಿದಿರುವ ಹಾಗೆ ನಮ್ಮ ಸರಕಾರವು ನಿವೃತ್ತ ಯೋಧರು, ನಿರುದ್ಯೋಗಿಗಳು, ಕಾರ್ಮಿಕರು, ಭಿಕ್ಷುಕರು, ಸ್ತ್ರೀಯರು, ಮಕ್ಕಳು, ಪತಿತೆಯರು, ಅಂಗವಿಕಲರು, ಕೈದಿಗಳು, ಬಾಲಾಪರಾಧಿಗಳು, ಕೊಂಪೆವಾಸಿಗಳು – ಹೀಗೆ ವಿವಿಧ ವರ್ಗಗಳಿಗೆ ಮತ್ತು ಗುಂಪುಗಳಿಗೆ ಸಹಾಯ ನೀಡುತ್ತಿದೆ. ಇವರೆಲ್ಲರೂ ಒಂದಲ್ಲ ಒಂದು ಕಾರಣಕ್ಕಾಗಿ ರಾಷ್ಟ್ರದ ಕರುಣೆಗೆ ಪಾತ್ರರಾಗಿದ್ದಾರೆ. ಇಂತಹ ಯೋಗಕ್ಷೇಮ ಕಾರ್ಯಕ್ರಮಗಳನ್ನು ಸಮಾಜಕಲ್ಯಾಣವೆಂದು ಕರೆಯುವುದು ರೂಢಿಯಲ್ಲಿದೆ.

"ಸಾಮಾಜಿಕ ಭದ್ರತೆ"ಯು ಸಮಾಜಕಲ್ಯಾಣದ ಇಂತಹ ಅನೇಕ ರೂಪಗಳಲ್ಲಿ ಒಂದು. ಸಮಾಜಕಲ್ಯಾಣವನ್ನು ಸಾಧಿಸುವ ಅನೇಕ ವಿಧಾನಗಳಿವೆ. ಅವುಗಳಲ್ಲಿ ಸಾಮಾಜಿಕ ಭದ್ರತೆಯೂ ಒಂದು ಎಂದು ಹೇಳಬೇಕು. ಇಲ್ಲಿ ರಾಷ್ಟ್ರ ಅಥವಾ ಸಮಾಜವು ವಿಪತ್ತಿಗೆ ಒಳಗಾದ ವ್ಯಕ್ತಿಗೆ ಸಂಕಟಕಾಲದಲ್ಲಿ ಸಹಾಯವನ್ನು ಕೊಡುತ್ತದೆ. ಇದು ಸಹಾಯ, ಪರಿಹಾರ ಧನ, ದಾನ ಮುಂತಾದ ನಿಶ್ಚಿತ ವಿಧಾನಗಳಲ್ಲಿ ದೊರೆಯಬಹುದು. ಅಥವಾ ಈಗಿನ ದಿನಗಳಲ್ಲಿ ಹೆಚ್ಚು ಪ್ರಚಾರದಲ್ಲಿರುವಂತೆ ಸಾಮಾಜಿಕ ವಿಮೆಯ ರೂಪದಲ್ಲೂ ಇರಬಹುದು. ಇದನ್ನೇ ಸಾಮಾಜಿಕ ಅಭಯ ಅಥವಾ ಸಾಮಾಜಿಕ ಭದ್ರತೆ ಎನ್ನುತ್ತಾರೆ.

"ಸಮಾಜ ಸಂರಕ್ಷಣೆ" ಯೆಂಬುದು ಸಮಾಜಕಲ್ಯಾಣದಲ್ಲಿ ಅಡಕವಾಗಿರುವ ಇನ್ನೊಂದು ವಿಷಯ. ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವ ಅನೇಕ ದುಷ್ಟಶಕ್ತಿಗಳಿವೆ. ಅವುಗಳಿಂದ ವ್ಯಕ್ತಿಗಳನ್ನು ಪಾರುಮಾಡಲು ಸರಕಾರಗಳು ಅನೇಕ ಪ್ರತಿಬಂಧಕ

ಉಪಾಯಗಳನ್ನೂ, ಶಾಸನಗಳನ್ನೂ. ಕಾರ್ಯಕ್ರಮಗಳನ್ನೂ ಕೈಗೊಳ್ಳುತ್ತವೆ. ಉದಾಹರಣೆಗೆ. ನಿರ್ಗತಿಕರಾದ ಹೆಣ್ಣುಮಕ್ಕಳನ್ನು ಕೆಟ್ಟ ಹಾದಿಗೆ ಎಳೆಯುವ ಜನರಿದ್ದಾರೆ. ಇವರಿಂದ ಅಬಲೆಯರನ್ನು ಉಳಿಸಲು ಸರಕಾರವು ಅನೇಕ ಸಂರಕ್ಷಣ ಉಪಾಯಗಳನ್ನು ಕೈಗೊಂಡಿದೆ. ಹಾಗೆಯೇ ಬಾಲಾಪರಾಧವನ್ನು ತಡೆಯುವ ಕಾರ್ಯಕ್ರಮಗಳಿವೆ. ವೇಶ್ಯಾವೃತ್ತಿಯನ್ನು ಅಳಿಸಲು ಮಾಡಿದ ಪ್ರಯತ್ನಗಳೂ, ಅಪರಾಧದ ವಿರುದ್ಧ ನಡೆಸಿದ ಹೋರಾಟವೂ, ಲಂಚ ನಿರ್ಮೂಲನವೂ ಸಮಾಜಸಂರಕ್ಷಣೆಯಲ್ಲಿ ಸೇರಿವೆ.

ಅಭದ್ರತೆಯ ಕಾರಣಗಳು :

ಅಭದ್ರ ಪರಿಸ್ಥಿತಿಗಳು ಅನೇಕ ಕಾರಣಗಳಿಂದ ಹುಟ್ಟಬಹುದು. ನಮಗೆ ಎಷ್ಟೇ ದೂರದೃಷ್ಟಿಯಿದ್ದರೂ ನಾವು ಭವಿಷ್ಯತ್ತನ್ನು ಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಿಲ್ಲ. ಅನೇಕ ಆಕಸ್ಮಿಕಗಳೂ ಅನಿಷ್ಟ ಸನ್ನಿವೇಶಗಳೂ ಬಂದೇ ಬರುತ್ತವೆ. ಅವು ನಮ್ಮನ್ನು ಹತವೀರ್ಯರನ್ನಾಗಿ ಮಾಡುತ್ತವೆ. ಉದಾಹರಣೆಗೆ, ನಮ್ಮ ಉದ್ದಿಮೆಗಳು ಮೇಲಿಂದ ಮೇಲೆ ದಿವಾಳಿ ಏಳುವುದಿದೆ. ಅತಿವೃಷ್ಟಿ, ಅನಾವೃಷ್ಟಿ, ಕೀಟಗಳ ಹಾವಳಿ ಮೊದಲಾದ ಕಾರಣಗಳಿಂದ ನಮ್ಮ ಬೇಸಾಯ ನಷ್ಟವಾಗಿ ಹೋಗಬಹುದು. ಕೆಲಸಗಾರರು ಒಂದು ಋತುವಿನಲ್ಲಿ ಮಾತ್ರ ದುಡಿಯುವಂತಾಗಿ ಉಳಿದ ವೇಳೆಯಲ್ಲಿ ಮೈಗಳ್ಳರಾಗಬೇಕಾಗಬಹುದು. ಯಂತ್ರೀಕರಣದ ಪರಿಣಾಮವಾಗಿ ನಿರುದ್ಯೋಗ ಒದಗಬಹುದು. ಉದ್ಯೋಗದಲ್ಲಿದ್ದಾಗ ಕಾಹಿಲೆ ಬೀಳುವದರಿಂದ ಗಳಿಕೆಯು ಹಟಾತ್ತನೆ ನಿಲ್ಲುವುದಿದೆ. ಹಾಗೆಯೇ

ಗಣಿಗಳಲ್ಲಿ ದುಡಿಯುವಾಗಲೋ, ಯಂತ್ರಗಳನ್ನು ನಡೆಸುವಾಗಲೋ. ಆಗುವ ದುರ್ಘಟನೆಗಳೂ ಇವೆ. ಕಾಹಿಲೆ–ಕಸಾರೆಯಾದಾಗ ಗಳಿಸಿಟ್ಟ ಹಣ ಸಾಲುವುದಿಲ್ಲ; ವೈದ್ಯಕೀಯ ಸಹಾಯ ದೊರೆಯಲಿಕ್ಕಿಲ್ಲ; ನಮ್ಮನ್ನು ಅವಲಂಬಿಸಿಕೊಂಡಿರುವ ಜನರು ನಿರ್ಗತಿಕರಾಗಬಹುದು. ಇನ್ನೊಂದು ದೊಡ್ಡ ವಿಪತ್ತೆಂದರೆ ವೃದ್ಧಾಪ್ಯ. ಅತಿ ಶ್ರೀಮಂತನಲ್ಲದ ಯಾವನಿಗೂ ಅದು ಘೋರವಾದ ಸನ್ನಿವೇಶ. ಇತ್ತೀಚಿನ ವರ್ಷಗಳಲ್ಲಿ ಅನೇಕ ಪಾಶ್ಚಿಮಾತ್ಯ ದೇಶಗಳ ಹಾಗೆ ನಮ್ಮ ದೇಶದಲ್ಲಿಯೂ ದುಡಿಯಲು ಬಾರದ ವೃದ್ಧರ ಸಂಖ್ಯೆ ಏರುತ್ತ ಹೋಗಿದೆ. ಇದರಿಂದಾಗಿ ವೃದ್ಧಾಪ್ಯದ ಸಮಸ್ಯೆಯೂ ಬೆಳೆಯುತ್ತಿದೆ. ಇದಲ್ಲದೆ, ತಾತ್ಕಾಲಿಕವಾಗಿಯೋ, ಶಾಶ್ವತವಾಗಿಯೋ ದುಡಿಯಲು ಅಸಮರ್ಥರಾಗುವವರ ಸಂಖ್ಯೆಯೂ ಕಡಿಮೆ ಇಲ್ಲ. ಯಾವುದನ್ನು ನಿಯಂತ್ರಿಸಿದರೂ ಸಾವನ್ನಂತೂ ನಿಯಂತ್ರಿಸಲು ಸಾಧ್ಯವಿಲ್ಲ. ಕುಟುಂಬದಲ್ಲಿ ಸಂಪಾದಿಸುವವನು ಸತ್ತಾಗ ಅಭದ್ರ ಪರಿಸ್ಥಿತಿ ಉಂಟಾಗುತ್ತದೆ. ಈ ಎಲ್ಲ ಸನ್ನಿವೇಶಗಳಲ್ಲಿಯೂ ವ್ಯಕ್ತಿಯು ತನ್ನ ಪರಿಸ್ಥಿತಿಯನ್ನು ನಿಯಂತ್ರಿಸಿಕೊಳ್ಳಲು ಸಾಧ್ಯವಿಲ್ಲ. ಅಪಾರ ಶಕ್ತಿಯನ್ನೂ ಸಂಪತ್ತನ್ನೂ ಉಳ್ಳ ಸರಕಾರವು ಮಾತ್ರ ಅವನನ್ನು ಉಳಿಸಬಹುದು. ಈ ಕಾರಣಕ್ಕಾಗಿಯೇ ಅತಿ ಪ್ರಾಚೀನಕಾಲದಿಂದಲೂ ಸರಕಾರಗಳು ಅಥವಾ ಶಕ್ತಿಶಾಲಿಯಾದ ಗ್ರಾಮ ಹಾಗು ನಗರ ಸಂಸ್ಥೆಗಳು ಭದ್ರತೆಯ ಉಪಾಯಗಳನ್ನು ಹೆಣೆಯುತ್ತ ಬಂದಿವೆ.

ಅಧ್ಯಾಯ – ೨

ಪ್ರಾಚೀನ ಭದ್ರತಾ ವ್ಯವಸ್ಥೆ :

ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಸುಲಭೋಪಾಯವೆಂದರೆ ನಾಳೆಗೆಂದು ಒಂದಿಷ್ಟು ಉಳಿತಾಯ ಮಾಡಿಕೊಂಡು ಸಂಕಟಕಾಲದಲ್ಲಿ ಉಪಯೋಗ ಮಾಡಿಕೊಳ್ಳುವುದು. ಇಂದಾದರೂ ಅಷ್ಟೆ, ಹಿಂದಾದರೂ ಅಷ್ಟೆ ! ವ್ಯಕ್ತಿಮಟ್ಟದಲ್ಲಿ ಇದೊಂದೇ ಮಹತ್ವದ ಉಪಾಯ. ಆಗೊಮ್ಮೆ ಈಗೊಮ್ಮೆ ಆಸತ್ಕಾಲದಲ್ಲಿ ಸಾಲಮಾಡಿ ರಕ್ಷಣೆ ಪಡೆಯಬಹುದು ನಿಜ. ಬಡ್ಡೀ ವ್ಯವಹಾರ ಮತ್ತು ಸಾಲ ಕೊಡುವ ಸಂಸ್ಥೆಗಳು ಇದಕ್ಕಾಗಿಯೇ ಹುಟ್ಟಿವೆ. ಆದರೆ ಇವು ಮಹತ್ವದ ಭದ್ರತೋಪಾಯಗಳಲ್ಲ. ನಮ್ಮ ದೇಶದಲ್ಲಿ ಹಿಂದೆ ಇದ್ದ ಸಂಯುಕ್ತಕುಟುಂಬ ಪದ್ಧತಿಯು ಈ ವಿಷಯದಲ್ಲಿ ಅತಿ ಮುಖ್ಯವಾಗಿತ್ತು. ಎಲ್ಲಾ ರೀತಿಯ ಕುತ್ತುಗಳಲ್ಲಿ ಸದಸ್ಯರಿಗೆ ಭದ್ರತೆಯನ್ನು ಒದಗಿಸುತ್ತಿತ್ತು. ಹಾಗೆಯೇ ಜಾತಿ-ಸಂಘಗಳು, ಶ್ರೇಣಿಗಳು, ಪಂಚಾಯತಗಳು, ಧಾರ್ಮಿಕ ಸಂಸ್ಥೆಗಳು ಕೂಡ ಉಪಕಾರಿಯಾಗಿದ್ದವು. ಉದ್ಯೋಗ ಕಳೆದುಕೊಂಡಾಗ, ವೃದ್ಧಾಪ್ಯ ಬಂದಾಗ, ಅನಾರೋಗ್ಯವಾದಾಗ ಇವು ಊರುಗೋಲಾಗಿದ್ದವು.

ಅನೇಕ ಕಡೆಗಳಲ್ಲಿ ಬಡವಿದ್ಯಾರ್ಥಿಗಳಿಗೆ ಹಾಗು ವಿಧವೆಯರು, ಅನಾಥರು, ರೋಗಿಗಳು, ಅಂಗಹೀನರಾದಿಯಾಗಿ ಸಂಕಟಪೀಡಿತರಿಗೆ ಸಹಾಯ ಸಲ್ಲಿಸುವ ವ್ಯವಸ್ಥೆಗಳು ಇದ್ದವು. ನಮ್ಮ ಹಳ್ಳಿಗಳಲ್ಲಿ ಇಂದಿಗೂ ಕೆಲವೊಮ್ಮೆ ಪಟ್ಟಿ ಎತ್ತಿ ಬಡಬಗ್ಗರ ಹಾಗು ನಿರ್ಗತಿಕರ ಶವಸಂಸ್ಕಾರ ನಡೆಯುತ್ತದೆ. ಬಡವಿದ್ಯಾರ್ಥಿಗಳಿಗೆ ವಾರಾನ್ನದ ವ್ಯವಸ್ಥೆ ಇದೆ. ಸಂಕಟಕಾಲದಲ್ಲಿ ಮಠಗಳಲ್ಲಿ ಆಶ್ರಯ ಪಡೆಯುವುದೂ ಸಾಧ್ಯವಿತ್ತು. ಕೆಲವು ದೇಶಗಳಲ್ಲಿ ವೃದ್ಧರಿಗೆ ಆಶ್ರಯ ಕೊಡುವ ಪ್ರತ್ಯೇಕ ಗೃಹಗಳಿದ್ದವು. ಮಕ್ಕಳು ಮತ್ತು ಹೆಂಗಸರು ಅನಾಥಾಶ್ರಮಗಳಲ್ಲಿ ಆಶ್ರಯ ಪಡೆಯಬಹುದಿತ್ತು. ಕೆಲವೆಡೆ ವಲಸೆಹೋಗುವ ಖಾಯಂ ವ್ಯವಸ್ಥೆಯೂ ಇತ್ತು. ಇಜಿಪ್ತದ ದೊರೆ ಜೋಸೆಫನು ತನ್ನ ಜನರು ಸಂಕಟಕಾಲದಲ್ಲಿ ಉಪಯೋಗಿಸಲೆಂದು ಬೃಹತ್ತಾದ ಧಾನ್ಯದ ಕಣಜ ಇಟ್ಟಿದ್ದನಂತೆ. ಇವೆಲ್ಲ ಇಂದು ಪೂರ್ಣವಾಗಿ ಮಾಯವಾಗಿ ಹೋಗಿವೆ ಎಂದೇನೂ ಅಲ್ಲ. ಅನೇಕ ಸೌಲಭ್ಯಗಳೂ, ಕಾರ್ಯಕ್ರಮಗಳೂ, ವ್ಯವಸ್ಥೆಗಳೂ ಉಳಿದುಕೊಂಡಿವೆ. ಅಲ್ಲದೆ ಸ್ಥಳೀಯ ಹಾಗು ಅಂತರರಾಷ್ಟ್ರೀಯ ಸಂಸ್ಥೆಗಳು ಹೊಸತಾಗಿ ಹುಟ್ಟಿಕೊಂಡು ಭದ್ರತೆಯನ್ನು ಒದಗಿಸುವಲ್ಲಿ ನೆರವಾಗುತ್ತಿವೆ. ಅಂತರರಾಷ್ಟ್ರೀಯ ಮಕ್ಕಳ-ನಿಧಿ, ವಿಶ್ವ ಆರೋಗ್ಯ-ಸಂಸ್ಥೆ, ಆಹಾರ-ಸಂಸ್ಥೆಗಳು ಇತ್ತೀಚೆಗೆ ಹುಟ್ಟಿಕೊಂಡ ವ್ಯವಸ್ಥೆಗಳು. ಹಳೆಯ ಭದ್ರತಾ ವ್ಯವಸ್ಥೆಗಳು ಜಟಿಲವಾದ ಆಧುನಿಕ ಸಮಾಜದಲ್ಲಿ ಬಡತನ, ರೋಗ ಮತ್ತು ವೃದ್ಧಾಪ್ಯಗಳು ತರುವ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಅಸಮರ್ಥವಾಗಿವೆ ಎಂದಿಷ್ಟೇ ಹೇಳಬಹುದು.

ಕುಂದು ಕೊರತೆಗಳು :

ಹೀಗೆ ಸಂಯುಕ್ತ ಕುಟುಂಬದಿಂದ ಮೊದಲುಗೊಂಡು ಅನೇಕ ಸಂಘ-ಸಂಸ್ಥೆಗಳು ಭದ್ರತೆಯನ್ನು ಒದಗಿಸುತ್ತಿದ್ದರೂ ಅವು ವ್ಯವಸ್ಥಿತವಿರಲಿಲ್ಲ. ಬೇಕಾದಾಗ ಸಹಾಯ ಸಿಕ್ಕೇ ಸಿಗುತ್ತದೆ ಎಂಬ ಭರವಸೆ ಇರಲಿಲ್ಲ. ನತದೃಷ್ಟ ವ್ಯಕ್ತಿಗೆ ಸಹಾಯ ಕೊಡಬಾರದು ಎನ್ನುವ ಜನರೂ ಇದ್ದರು. ನಮಗೆ ಬರುವ ವಿಪತ್ತುಗಳೆಂದರೆ ದೇವರ ಶಾಪವೆಂದೂ, ಅವು ಪಾಪಕ್ಕೆ ಸಿಗುವ ತಕ್ಕ ಪ್ರತಿಫಲ ವೆಂದೂ ಭಾವಿಸುವ ಜನರಿದ್ದರು. ಈ ಸಂಕಟಗಳು ವ್ಯಕ್ತಿಯ ಸೋಮಾರಿತನಕ್ಕೆ ತಕ್ಕ ಶಾಸ್ತಿಯೆಂದೂ ಕೆಲವರು ಭಾವಿಸುತ್ತಿದ್ದರು. ಮತ್ತೆ ಕೆಲವರು ಸಮಾಜದಿಂದ ಯಾಚಿಸುವುದು ತಪ್ಪೆಂದೂ ನಮ್ಮನ್ನು ನಾವೇ ಉಳಿಸಿಕೊಳ್ಳಬೇಕೆಂದೂ ಹೇಳುತ್ತಿದ್ದರು. ವ್ಯಕ್ತಿಯ ಜೀವನಕ್ಕೆ ಭದ್ರತೆಯನ್ನು ಕೊಡುವುದು ರಾಷ್ಟ್ರದ ಹೊಣೆ ಯೆಂಬ ಭಾವನೆ ಆಗ ಇನ್ನೂ ಬಲಿತಿರಲಿಲ್ಲ. ಇದಲ್ಲದೆ, ಆಗಿನ ಸಂಘ-ಸಂಸ್ಥೆಗಳು ತಮ್ಮ ತಮ್ಮ ಜಾತಿ-ಪಂಥಗಳ ಜನರಿಗೆ ಮಾತ್ರ ಸಹಾಯ ಸಲ್ಲಿಸುತ್ತಿದ್ದುದೇ ಹೆಚ್ಚು. ಸಹಾಯವನ್ನು ಯಾರಿಗೆ ಕೊಡಬೇಕು, ಎಷ್ಟು ಕೊಡಬೇಕು, ಹೇಗೆ ಕೊಡಬೇಕು ಎನ್ನುವುದೂ ಅನಿಶ್ಚಿತವಾಗಿತ್ತು. ಸಹಾಯವನ್ನು ಹೇಗೆ ಸಂಗ್ರಹಿಸಬೇಕು ಮತ್ತು ಹೇಗೆ ವಿತರಣೆ ಮಾಡಬೇಕೆಂಬುದಕ್ಕೂ ಸರಿಯಾದ ಆಧಾರಗಳು ಇದ್ದಿಲ್ಲ. ಒಟ್ಟಿನಲ್ಲಿ ಪ್ರಾಚೀನ ಭದ್ರತಾ ಮಾರ್ಗಗಳು ಸಮರ್ಪಕ ವಾಗಿರಲಿಲ್ಲವೆಂದೇ ಹೇಳುವುದು ಸೂಕ್ತ.

ಅಧ್ಯಾಯ – ೩

ಆಧುನಿಕ ಕಾಲ :

ವ್ಯವಸ್ಥಿತವಾಗಲು ಕಾರಣಗಳು :

ಬರಬರುತ್ತ ಎಲ್ಲ ರಾಷ್ಟ್ರಗಳಲ್ಲಿಯೂ ಭದ್ರತೆಯ ವಿಧಾನಗಳು ಹೆಚ್ಚು ಹೆಚ್ಚಾಗಿ ವ್ಯವಸ್ಥಿತವಾಗುತ್ತ ನಡೆದವು. ಯುರೋಪ್ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಸುಮಾರು ೧೦೦–೧೫೦ ವರ್ಷಗಳಿಂದ ಹೀಗೆ ನಡೆಯುತ್ತಿದೆ. ಭಾರತದಲ್ಲಿ ಕೂಡ ನಾವು ಇಂತಹದೇ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಇಲ್ಲಿ ಹಳೆಯ ವ್ಯವಸ್ಥೆಗಳು ಹೋಗಿ ಹೊಸ ವ್ಯವಸ್ಥೆಗಳು ಹುಟ್ಟಿಕೊಂಡಿವೆ. ಇದಕ್ಕೆ ಹಲವಾರು ಕಾರಣಗಳಿವೆ. ಹಿಂದೆ ನಮ್ಮ ದೇಶ ಕೃಷಿಪ್ರಧಾನವಾಗಿತ್ತು. ನೆಲಕ್ಕೆ ಅಂಟಿಕೊಂಡು ನಿಲ್ಲುವ ನಮ್ಮ ಜನರ ಜೀವನ ಹೆಚ್ಚು ಕಡಿಮೆ ಭದ್ರವಾಗಿತ್ತು. ಮುಖ್ಯವಾಗಿ ಸಂಯುಕ್ತ ಕುಟುಂಬದಲ್ಲಿ ಎಲ್ಲರಿಗೂ ಸಂರಕ್ಷಣೆ ದೊರೆಯುತ್ತಿತ್ತು. ಸ್ವಂತ ಸಾಗುವಳಿ ಅಥವಾ ಕಸಬು ಮಾಡುವುದು ಹೆಚ್ಚಾಗಿದ್ದುದರಿಂದ ನೌಕರಿ ಕಳೆದುಕೊಳ್ಳುವ ಪ್ರಶ್ನೆ ಏಳುತ್ತಿರಲಿಲ್ಲ. ಆದರೆ ಬರಬರುತ್ತ ನಗರೀಕರಣ ಮತ್ತು

ಔದ್ಯೋಗೀಕರಣ ಬೆಳೆದಂತೆ, ಆರ್ಥಿಕ ವ್ಯವಸ್ಥೆ ಬದಲಾದಂತೆ, ಪರಿಸ್ಥಿತಿ ಬದಲಾಯಿಸಿತು. ಅನೇಕ ಪ್ರಭಾವಗಳಿಂದಾಗಿ ಸಂಯುಕ್ತ ಕುಟುಂಬವು ಬಲಹೀನವಾಗುತ್ತ ಹೋದಂತೆ, ಹಿಂದೆ ಸಿಗುತ್ತಿದ್ದ ರಕ್ಷಣೆ ಅಲ್ಲಿ ಸಿಗದಂತಾಯಿತು. ಚಿಕ್ಕ ಮಕ್ಕಳು, ವೃದ್ಧರು ಮತ್ತು ಹೆಣ್ಣುಮಕ್ಕಳು ಯಥಾನುಶಕ್ತಿ ದುಡಿದು ಸಂಯುಕ್ತಕುಟುಂಬಕ್ಕೆ ಸಹಕಾರಿಯಾಗುತ್ತಿದ್ದರು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಇವರೆಲ್ಲ ಕುಟುಂಬಕ್ಕೆ ಹೊರೆಯಾದರು. ಅದೇ ರೀತಿಯಲ್ಲಿ ಜಾತಿ ಮತ ವ್ಯವಸ್ಥೆಗಳೂ ಮಹತ್ವವನ್ನು ಕಳೆದುಕೊಂಡವು. ಉದಾರಾಭಿಪ್ರಾಯ ಬೆಳೆದಂತೆ, ವ್ಯಕ್ತಿವಾದವು ಪುರಸ್ಕೃತವಾದಂತೆ, ಜಾತಿ ಮತಗಳಿಂದ ಸಿಗುವ ರಕ್ಷಣೆ ತಪ್ಪಿತು. ಹಾಗೆಯೇ ಪಂಚಾಯತ ವ್ಯವಸ್ಥೆಗಳೂ ಕುಸಿದವು. ಹಳ್ಳಿಗಳಿಂದ ನಗರಗಳಿಗೆ ದೌಡು ಬರಲು ತೊಡಗಿದಂತೆ ಹೆಚ್ಚು ಹೆಚ್ಚು ಅಭದ್ರ ಪರಿಸ್ಥಿತಿಗಳು ಕಾಣಿಸಿಕೊಂಡವು. ಔದ್ಯೋಗೀಕರಣದೊಂದಿಗೆ ಜೀತಗಾರರ ಹೊಸದಾದ ವರ್ಗವೊಂದು ಹುಟ್ಟಿಕೊಂಡಿದೆ. ಅವರಿಗೆ ಹಿಂದೆ ತಮ್ಮ ಹಳ್ಳಿಗಳಲ್ಲಿ ಸಿಗುತ್ತಿದ್ದ ರಕ್ಷಣೆಯು ನಗರದ ಕಾರಖಾನೆಗಳಲ್ಲಿ ಅಥವಾ ಕಚೇರಿಗಳಲ್ಲಿ ಸಿಗುವುದಿಲ್ಲ. ಈ ಕಾರಖಾನೆಗಳು, ಗಣಿಗಳು, ಯಂತ್ರಗಳು, ವಾಹನಗಳು ಆಕಸ್ಮಿಕ-ಆಪತ್ತುಗಳನ್ನು ಹೆಚ್ಚಿಸಿದವು. ನೌಕರಿ ಸಿಗದಿರುವುದು ಅಥವಾ ಇದ್ದ ನೌಕರಿ ಕಳೆದುಕೊಳ್ಳುವುದು ಮೊದಲಾದ ಹೊಸ ಅಭದ್ರತೆಗಳು ಹುಟ್ಟಿಕೊಂಡವು. ಹೀಗೆ ಸಾಮಾಜಿಕ ಭದ್ರತೆಯ ಆವಶ್ಯಕತೆ ಹೆಚ್ಚಾಗುತ್ತ ನಡೆಯಿತು. ಇದರೊಂದಿಗೆಯೇ ಒಬ್ಬ ವ್ಯಕ್ತಿಯ ದುಸ್ಥಿತಿಗೆ ಅವನೊಬ್ಬನೇ ಹೊಣೆಯಲ್ಲ, ಪರಿಸರವೂ ಕಾರಣ ಎನ್ನುವ ಭಾವನೆಯೂ ಬೆಳೆಯಿತು. ಇದ

ರಿಂದಾಗಿ ರಾಷ್ಟ್ರವು ಸಾಮಾಜಿಕ ಭದ್ರತೆಯನ್ನು ಒದಗಿಸಲು ಮುಂದೆ ಬರಲೇಬೇಕಾಯಿತು.

ಹೊಸ ಉಪಾಯಗಳು :

ಮೊದಮೊದಲಿಗೆ ಸರಕಾರಗಳು ಭದ್ರತೆಯ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಲಿಲ್ಲ. ಕೇವಲ ಅಪ್ರತ್ಯಕ್ಷವಾಗಿ ಅವು ಸಹಾಯ ನೀಡಿದವು. ಅಲ್ಲಿ ಇಲ್ಲಿ ಉಳಿತಾಯ-ಬ್ಯಾಂಕುಗಳನ್ನು ಸ್ಥಾಪಿಸುವುದು ಅಥವಾ ಪ್ರೋತ್ಸಾಹಿಸುವುದು ಪ್ರಾರಂಭವಾಯಿತು. ನಂತರ ಬರಗಾಲ-ಪರಿಹಾರ, ನಿರುದ್ಯೋಗ-ನಿವಾರಣೆ ಮುಂತಾಗಿ ಕೆಲವು ಪರಿಹಾರ-ಕಾರ್ಯಕ್ರಮಗಳೂ, ಶಾಸನಗಳೂ ಬಂದವು. ಸಂತ್ರಸ್ತರಿಗೆ ಪರಿಹಾರ ಸಲ್ಲಿಸುವ ಇಂಗ್ಲಂಡಿನ "ಬಡವರ ಶಾಸನ" (Poor Laws, 1601) ಒಂದು ಒಳ್ಳೆಯ ಉದಾಹರಣೆ. ದೊಡ್ಡ ದೊಡ್ಡ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಲುವಾಗಿ ಪರಿಹಾರ ಕಾಯ್ದೆಗಳು ಜಾರಿಗೆ ಬಂದವು. ಕೆಲಸಗಾರನು ತನ್ನ ಕೆಲಸದಲ್ಲಿ ತೊಡಗಿರುವಾಗ ಊನಗೊಂಡರೆ ಅಥವಾ ಅಂಗಾಂಗಳನ್ನು ಕಳೆದುಕೊಂಡರೆ ಮಾಲಿಕರು ಅವನಿಗೆ ಪರಿಹಾರ ಕೊಡಬೇಕೆಂಬ ಪರಿಪಾಠ ಪ್ರಾರಂಭವಾಯಿತು. ಭಾರತದ ಕಾರ್ಮಿಕರ ಪರಿಹಾರ-ಕಾಯ್ದೆ (1923), ಹೆರಿಗೆ (ಮಾತೃತ್ವ) ಸಹಾಯ ದ್ರವ್ಯ-ಕಾಯ್ದೆ (1928–1948) ಇತ್ಯಾದಿ ಕಾಯ್ದೆಗಳು ಬಂದವು. ಉದ್ಯೋಗ ಕಳೆದುಕೊಂಡು ಬವಣೆಪಡುವ ಜನರಿಗೆ ಸಹಾಯ ಸಿಗಲೆಂದು ಪೂರಕ ಋತು-ಕಾರ್ಯಗಳನ್ನು ಸರಕಾರಗಳು

ಕೈಗೊಂಡವು. ಅಲ್ಲಲ್ಲಿ ಬೇರೆ ಬೇರೆ ವಿಮಾಯೋಜನೆಗಳು ಬಂದವು. ಹೀಗೆ ಬೇರೆ ಬೇರೆ ವಿಧಾನಗಳಿಂದ ಸರಕಾರಗಳು ಸಂಕಟದಲ್ಲಿರುವ ಜನರಿಗೆ ರಕ್ಷಣೆಯನ್ನು ಒದಗಿಸಿದವು. ಅವರು ನಿರ್ಗತಿಕರಾಗದಂತೆ ಉಪಾಯಗಳನ್ನು ಕಂಡು ಹಿಡಿದವು.

ಅಧ್ಯಾಯ – ೪

ಸಾಮಾಜಿಕ ಭದ್ರತೆಯ ಪ್ರಚಲಿತ ಮಾರ್ಗಗಳು :

೧. ಸಾಮಾಜಿಕ ಸಹಾಯ :

ಇತ್ತೀಚಿನ ದಶಕಗಳಲ್ಲಿ ಎಲ್ಲ ದೇಶಗಳಲ್ಲಿಯೂ ಪ್ರಚಲಿತವಿರುವ ಮಾರ್ಗಗಳೆಂದರೆ ಎರಡು : (೧) ಸಾಮಾಜಿಕ ಸಹಾಯ ಮತ್ತು (೨) ಸಾಮಾಜಿಕ ವಿಮೆ.

ಸಾಮಾಜಿಕ ಸಹಾಯವೆಂದರೆ ಸರಕಾರವೇ ನೇರವಾಗಿ ಸಂತ್ರಸ್ತ ವ್ಯಕ್ತಿಗೆ ಸಹಾಯ ಸಲ್ಲಿಸುವುದು. ವ್ಯಕ್ತಿಯು ತಾನೇನೂ ಮಾಡಬೇಕಾಗಿಲ್ಲ. ವಂತಿಗೆ ಸಲ್ಲಿಸಬೇಕಾಗಿಲ್ಲ. ಅವನು ಎದುರಿಸುತ್ತಿರುವ ಗಂಡಾಂತರದ ಲೆಕ್ಕಾಚಾರ ಹಾಕಿ ಸರಕಾರವೇ ಬೇಕಾದ ಪ್ರಮಾಣದಲ್ಲಿ ಸಹಾಯ ಕೊಡುತ್ತದೆ. ಉದಾಹರಣೆಗೆ, ಕಡಿಮೆ ವರಮಾನವಿರುವ ಜನರ ಮಕ್ಕಳ ವಿದ್ಯಾಭ್ಯಾಸವನ್ನು ಸರಕಾರ ವಹಿಸಿಕೊಳ್ಳಬಹುದು. ಇಂಥವರ ವರಮಾನವು ಹೆಚ್ಚುತ್ತ ಹೋದಂತೆ ಸರಕಾರವು ಕೊಡುವ ನೆರವು ಕಡಿಮೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ರೂ. 2400 ಕ್ಕಿಂತ ಕಡಿಮೆ ವರಮಾನವಿರುವ ಜನರ ಮಕ್ಕಳಿಗೆ ಪುಕ್ಕಟೆ ವಿದ್ಯೆ ದೊರಕುತ್ತದೆ. ಅದರಂತೆಯೇ

ನಮ್ಮ ಹಲವು ರಾಜ್ಯಸರಕಾರಗಳು ವೃದ್ಧರಿಗಾಗಿ ಪಿಂಚಣಿಯೋಜನೆಗಳನ್ನು ಜಾರಿಗೆ ತಂದಿವೆ. (ಮೈಸೂರು ಸರಕಾರವು ಇತ್ತೀಚೆಗೆ ಅದನ್ನು ರದ್ದುಪಡಿಸಿದೆ.) ಇತರ ದೇಶಗಳಲ್ಲಿ, ಮುಖ್ಯವಾಗಿ ಡೆನ್ಮಾರ್ಕಿನಲ್ಲಿ, ೧೯ನೆಯ ಶತಮಾನದ ಅಂತ್ಯದ ವರೆಗೆ ಇಂತಹ ಸಹಾಯ ಕಾರ್ಯಕ್ರಮಗಳು ಜಾರಿಯಲ್ಲಿದ್ದವು. ಬರಗಾಲ, ನೆರೆ ಹಾವಳಿ, ಭೂಕಂಪ ಮುಂತಾದ ನೈಸರ್ಗಿಕ ವಿಪತ್ತುಗಳಿಂದ ಪೀಡಿತರಾದವರಿಗೆ ಸಹಾಯ ಸಲ್ಲಿಸುವ ಕ್ರಮ ಅನೇಕ ದೇಶಗಳಲ್ಲಿ ಇದೆ. ಅಲ್ಲದೆ ದುಡಿಯಲಾರದ ಬಡಬಗ್ಗರಿಗೆ 'ದಾನ' ಕೊಡುವ ಪದ್ಧತಿಯೂ ಇದೆ. ಇಂಗ್ಲೆಂಡಿನಲ್ಲಿದ್ದ ಬಡವರ ಶಾಸನದ ಪ್ರಕಾರ ಭಿಕ್ಷಾಟನೆಯು ಶಾಸನಬಾಹಿರವಾಗಿತ್ತು. ಬಡವರನ್ನು ಸಂರಕ್ಷಿಸುವ ಹೊಣೆಗಾರಿಕೆಯು ಸರಕಾರಕ್ಕೆ ಸೇರಿದ್ದು. ಖರ್ಚು ವಿಪರೀತವಾದ್ದರಿಂದ ಮುಂದೆ ಅದನ್ನು ಕೈಬಿಡಲಾಯಿತು. ಅಲ್ಲದೆ ಬೇರೆ ಕಾರಣಗಳಿಗಾಗಿಯೂ ಈ ವ್ಯವಸ್ಥೆಯು ಯಶಸ್ವಿಯಾಗಲಿಲ್ಲ. ಆ ನಂತರ ಜರ್ಮನಿಯ ಹ್ಯಾಂಬರ್ಗ್ ಹಾಗು ಎಲ್ಬರ್‌ಫೆಲ್ಡ ನಗರಗಳ ನಗರ ಸಭೆಗಳು ಇಂತಹ ಸಹಾಯದ ಹೊಸಹೊಸ ಪ್ರಯೋಗಗಳನ್ನು ಮಾಡಿದ್ದುಂಟು. ಈ ಎಲ್ಲ ಸಹಾಯಕಾರ್ಯಕ್ರಮಗಳನ್ನು ಸರಕಾರ ಅಥವಾ ನಗರಸಭೆ ಅಥವಾ ಬೇರೊಂದು ಸೇವಾವ್ಯವಸ್ಥೆಯು ಯೋಜಿಸಿ ಅದರ ವೆಚ್ಚವನ್ನು ಹೊರುತ್ತದೆ.

ಸಹಾಯವನ್ನು ಪಡೆಯುವ ವ್ಯಕ್ತಿಯು ಇಲ್ಲಿ ಭಾಗವಹಿಸುವ ಪ್ರಶ್ನೆಯೇ ಇಲ್ಲ. ಅವನು ಕೇವಲ ಅರ್ಥಿ ಅಥವಾ ಯಾಚಕ. ದಾನಿಯಾದ ಸರಕಾರವನ್ನು ಯಾಚಿಸಿ ಅವನು ತನ್ನನ್ನು ಸಂರಕ್ಷಿಸಿಕೊಳ್ಳಬೇಕು. ಹೀಗೆ ಕೈ ಒಡ್ಡುವುದು ಆತ್ಮಗೌರವಕ್ಕೆ ಕುಂದುತರುತ್ತದೆ

ಎಂದು ಅನೇಕರು ಇಂತಹ ದಾನವನ್ನು ಸ್ವೀಕರಿಸುತ್ತಿರಲಿಲ್ಲ. ಮೇಲಾಗಿ ಸರಕಾರವು ಮನಸ್ಸಿಲ್ಲದೆ ಕೊಡುತ್ತಿತ್ತು; ತಡವಾಗಿ ಕೊಡುತ್ತಿತ್ತು; ಬೇಕಾದ್ದಕ್ಕಿಂತ ಬಹಳ ಕಡಿಮೆ ಕೊಡುತ್ತಿತ್ತು. ಇದನ್ನು ನಿರ್ವಹಿಸುತ್ತಿದ್ದ ಅಧಿಕಾರಿಗಳಲ್ಲಿ ಪ್ರೇಮ ಮನೋವೃತ್ತಿ ಇರಲಿಲ್ಲ. ಈ ಎಲ್ಲ ಕಾರಣಗಳಿಂದ ಸಾಮಾಜಿಕ ಸಹಾಯ ಪದ್ಧತಿಯು ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿತು. ಇಂದು ಮುಂದುವರಿದ ದೇಶಗಳಲ್ಲಿ ಈ ಪದ್ಧತಿ ಮಾಯವಾಗುತ್ತಿದೆ. ಈಗ ಜನಪ್ರಿಯವಾಗಿರುವ ವಿಧಾನವೆಂದರೆ ಸಾಮಾಜಿಕ ವಿಮೆಯೆಂದೇ ಹೇಳಬಹುದು.

೨. ಸಾಮಾಜಿಕ ವಿಮೆ :

ಬೇರೆ ದೇಶಗಳಲ್ಲಿರುವಂತೆಯೇ ನಮ್ಮಲ್ಲೂ ಅನೇಕ ಸಾಮಾಜಿಕ ವಿಮಾ ಯೋಜನೆಗಳಿವೆ. ನಮಗೆ ಪರಿಚಿತವಿರುವ ಪಿಂಚಣಿ ಯೋಜನೆಗಳು, ಕ್ಷೇಮನಿಧಿ (ಪ್ರಾವಿಡೆಂಟ ಫಂಡ್) ಯೋಜನೆಗಳು, ಆರೋಗ್ಯವಿಮೆ – ಇವೆಲ್ಲ ಸಾಮಾಜಿಕ ವಿಮೆಯಲ್ಲಿ ಸೇರಿವೆ.

ವಿಮೆಯ ತತ್ವದ ಮೇಲೆ ಸಮಾಜವು ವ್ಯಕ್ತಿಗೆ ಸಹಾಯ ಸಲ್ಲಿಸಿದರೆ ಅದು ಸಾಮಾಜಿಕ ವಿಮೆ ಎನ್ನಿಸಿಕೊಳ್ಳುವುದು. ಹಿಂದೆ ಶ್ರೇಣಿಗಳು, ಸ್ನೇಹ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಂದ ವಂತಿಗೆ ಶೇಖರಿಸಿ, ಹಾಗೆ ಕೂಡಿಹಾಕಿದ ನಿಧಿಯಿಂದ ಗಂಡಾಂತರಕಾಲದಲ್ಲಿ ತಮ್ಮ ಸದಸ್ಯರಿಗೆ ಸಹಾಯ ಸಲ್ಲಿಸುತ್ತಿದ್ದವು. ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಪ್ರಚಾರದಲ್ಲಿದ್ದ 'ನಿಧಿ'ಗಳು ಅಥವಾ ಚಿಟ್‌ಫಂಡುಗಳು ಇಂತಹ ಯೋಜನೆಗಳು. ಇವನ್ನು

ಸೇರಲೇ ಬೇಕೆಂಬ ಕಡ್ಡಾಯವಿಲ್ಲ. ಆದ್ದರಿಂದ ಇವುಗಳನ್ನು 'ಸ್ವಯಂ ಪ್ರೇರಣೆಯ ಸಾಮಾಜಿಕ ವಿಮೆ' ಎನ್ನಬಹುದು. ಇವು ಭದ್ರತಾ ಮಾರ್ಗಗಳೆಂದು ಅಷ್ಟೊಂದು ಯಶಸ್ವಿಯಾಗಿಲ್ಲ. ಇವುಗಳನ್ನು ಸಂಘಟಿಸುವ ಜನರಿಗೆ ಲೆಕ್ಕದ ಸರಿಯಾದ ಜ್ಞಾನವಿರಲಿಲ್ಲ. ಇವುಗಳ ಮೇಲೆ ಯೋಗ್ಯ ಮೇಲ್ವಿಚಾರಣೆಯೂ ಇರಲಿಲ್ಲ. ಕಾದಿರಿಸಿದ ನಿಧಿಯಿರಲಿಲ್ಲ. ಇವುಗಳಿಂದಾಗಿ ಕಾಲಕ್ರಮೇಣ ಸ್ವಯಂ ಪ್ರೇರಣೆಯ ವಿಮೆ ತನ್ನ ಮಹತ್ವವನ್ನು ಕಳೆದುಕೊಂಡಿದೆ.

ಈಗ ಅತಿ ಜನಪ್ರಿಯವಾದ ವಿಧಾನವೆಂದರೆ 'ಕಡ್ಡಾಯದ ಸಾಮಾಜಿಕ ವಿಮೆ'. ಸರಕಾರಿ ನೌಕರರು, ಸಾರ್ವಜನಿಕ ಸೇವಾಸಂಸ್ಥೆಗಳಲ್ಲಿ ಕೆಲಸಮಾಡುವ ಉದ್ಯೋಗಿಗಳು, ಗಣಿ ಮತ್ತು ಕಾರ್ಖಾನೆಗಳಲ್ಲಿ ದುಡಿಯುವ ಕೆಲಸಗಾರರು ಇಂತಹ ವಿಮಾಯೋಜನೆಗಳ ವ್ಯಾಪ್ತಿಗೆ ಒಳಗಾಗಿದ್ದಾರೆ. ಸರಕಾರವು ಕಡ್ಡಾಯವಾಗಿ ಈ ಯೋಜನೆಯನ್ನು ಇವರ ಮೇಲೆ ಹೇರಿದೆ. ಒಂದು ಉದ್ದಿಮೆಗೆ ಸೇರಿದ ಎಲ್ಲಾ ಕೆಲಸಗಾರರೂ ಈ ವಿಮೆಗೆ ಸೇರಲೇಬೇಕೆಂಬ ನಿಯಮವಿದೆ. ಎಲ್ಲಾ ಸರಕಾರಿ ನೌಕರರಿಗೂ ಇದು ಅನ್ವಯಿಸುತ್ತದೆ. ಹಾಗೆಯೇ ಗಣಿಗಳಲ್ಲಿಯ ಕೆಲಸಗಾರರು, ಚಹ ಮತ್ತು ರಬ್ಬರ್ ತೋಟಗಳಲ್ಲಿ ದುಡಿಯುವ ಜನರು, ರೈತರು, ಹೀಗೆ ಬೇರೆ ಬೇರೆ ವರ್ಗದ ಜನರು ವಿಮೆಯ ವ್ಯಾಪ್ತಿಗೆ ಒಳಗಾಗಬಹುದು. ಮೊದಲೇ ನಿರ್ಧರಿಸಿದ ಪ್ರಮಾಣದಲ್ಲಿ ಪ್ರತಿ ತಿಂಗಳೂ ಇವರು ಸರಕಾರಕ್ಕೆ ಅಥವಾ ಒಂದು ನಿಧಿಗೆ ವಂತಿಗೆ ಸಲ್ಲಿಸುತ್ತಾರೆ. ಅಷ್ಟೇ ಪ್ರಮಾಣದ ವಂತಿಗೆಯನ್ನು ಇವರಿಗಾಗಿ ಮಾಲಿಕರೂ ಸಲ್ಲಿಸುತ್ತಾರೆ. ಸರಕಾರವೂ ಕೆಲವೊಮ್ಮೆ ಅಲ್ಪಸ್ವಲ್ಪ ಸಹಾಯ ಸಲ್ಲಿಸಬಹುದು. ಹೀಗೆ ಕೂಡಿದ

ನಿಧಿಯಿಂದ ನಿಯಮಾನುಸಾರವಾಗಿ ಜನರು ಪ್ರಯೋಜನ ಪಡೆಯುತ್ತಾರೆ. ಇದೇ ವಿಮೆಯ ತಿರುಳು.

ಈ ಕಡ್ಡಾಯದ ವಿಮೆಯನ್ನು ಪ್ರಪ್ರಥಮವಾಗಿ ಜಾರಿಗೆ ತಂದ ಶ್ರೇಯಸ್ಸು ಜರ್ಮನಿಯ ಉಕ್ಕಿನ ಮನುಷ್ಯ ಬಿಸ್ಮಾರ್ಕನಿಗೆ ಸಲ್ಲಬೇಕು. ಜನಪ್ರಿಯತೆಯನ್ನು ಗಳಿಸಬೇಕೆಂಬ ರಾಜಕೀಯ ಕಾರಣಕ್ಕಾಗಿ ಅವನು ಹಾಗೆ ಮಾಡಿದನೆನ್ನುವವರು ಇದ್ದಾರೆ. ಏನಿದ್ದರೂ ಬಿಸ್ಮಾರ್ಕನು ೧೮೮೩ ರಲ್ಲಿ ಜಾರಿಗೆ ತಂದ ವಿಮಾ ಯೋಜನೆಗಳು ಇಂತಹ ಯೋಜನೆಗಳಿಗೆ ನಾಂದಿ ಹಾಡಿದವು.

ಅಧ್ಯಾಯ – ೫

ಸಮಾಜ ಸುಭದ್ರತೆಯ ಸುತ್ತುನೋಟ :

ಕಳೆದ ನಾಲ್ಕೈದು ದಶಕಗಳ ಅವಧಿಯಲ್ಲಿ ಸಾಮಾಜಿಕ ಭದ್ರತೆಯ ದಿಸೆಯಲ್ಲಿ ಬಹಳಷ್ಟು ಪ್ರಗತಿಯಾಗಿದೆ ಎನ್ನಬೇಕು. ಜಗತ್ತಿನ ಅನೇಕ ರಾಷ್ಟ್ರಗಳು ಭದ್ರತೆಯ ಹೊಸಹೊಸ ವಿಧಾನಗಳನ್ನು ಹುಡುಕಿವೆ. ವ್ಯಕ್ತಿ ಜೀವನದ ಅನೇಕ ದುರ್ಧರ ಪ್ರಸಂಗಗಳಲ್ಲಿ ಜನರಿಗೆ ರಕ್ಷಣೆಯನ್ನು ನೀಡುತ್ತವೆ. ಕ್ರಿ. ಶ. ೧೯೫೨ರೊಳಗಾಗಿ ಸುಮಾರು ೪೫ ದೇಶಗಳು ಉದ್ಯೋಗದಲ್ಲಿದ್ದ ನೌಕರರು ಗಾಯಗೊಂಡಾಗ, ಕಾಹಿಲೆ ಬಿದ್ದಾಗ ಅಥವಾ ಹೆರಿಗೆಯಲ್ಲಿದ್ದಾಗ ಸಹಾಯ ಸಲ್ಲಿಸುವ ಕಾರ್ಯಕ್ರಮಗಳನ್ನು ಹೊಂದಿದ್ದವು. ೨೪ ದೇಶಗಳು ನಿರುದ್ಯೋಗಿಗಳಿಗೆ ರಕ್ಷಣೆ ಕೊಡುತ್ತಿದ್ದವು. ೪೪ ರಾಷ್ಟ್ರಗಳು ತಮ್ಮ ವೃದ್ಧರಿಗಾಗಿ ಒಂದಲ್ಲ ಒಂದು ರೀತಿಯ ಭದ್ರತೆಯನ್ನು ಕೊಡುತ್ತಿದ್ದವು. ಕಳೆದ ಹತ್ತು-ಹದಿನೈದು ವರ್ಷಗಳಲ್ಲಿ ಸುಭದ್ರತೆಯ ಹೊಸ ಕಾರ್ಯಕ್ರಮಗಳು ಹುಟ್ಟಿಕೊಂಡಿವೆ. ಕೆಲವು ರಾಷ್ಟ್ರಗಳು ಸಾಧಿಸಿದ ಪ್ರಗತಿಯನ್ನು ಸ್ಥೂಲವಾಗಿ ನಾವು ಇಲ್ಲಿ ನೋಡಬಹುದು.

ಅಂತರರಾಷ್ಟ್ರೀಯ ಶ್ರಮಸಂಸ್ಥೆ (I. L. O.) ಯ ಪ್ರ
೧೯೫೭–೫೭ ರಲ್ಲಿ ಜರ್ಮನಿಯು ತನ್ನ ರಾಷ್ಟ್ರೀಯ ವರಮಾ
ಶೇಕಡಾ ೨೦ ಭಾಗವನ್ನು ಸಮಾಜ ಭದ್ರತೆಗಾಗಿ ವೆಚ್ಚಮಾಡಿ
ಫ್ರಾನ್ಸ ದೇಶವು ಹೆಚ್ಚುಕಡಿಮೆ ಅಷ್ಟನ್ನೇ, ಅಂದರೆ ೧೯%
ವಿನಿಯೋಗಿಸಿತು. ಇದೇ ಅವಧಿಯಲ್ಲಿ ಸ್ವೀಡನ್ ತನ್ನ ರಾಷ್ಟ್ರೀ
ವರಮಾನದ ೧೩%ನ್ನೂ, ಡೆನ್ಮಾರ್ಕ್ ಮತ್ತು ಇಂಗ್ಲೆಂಡುಗ
ತಲಾ ೧೨% ನ್ನೂ ವೆಚ್ಚಮಾಡಿದವು. ಅಮೇರಿಕಾ ಮ
ಜಪಾನ್ ದೇಶಗಳು ಸಮಾಜ ಭದ್ರತೆಗಾಗಿ ಸುಮಾರು ೬%
ಖರ್ಚು ಮಾಡಿದವು. ಭಾರತವು ಈ ಬಗ್ಗೆ ಖರ್ಚು ಮಾಡಿ
ತನ್ನ ರಾಷ್ಟ್ರೀಯ ವರಮಾನದ ೧%ಕ್ಕೂ ಕಡಿಮೆ.

ಬ್ರಿಟನ್ :

ಸಾಮಾಜಿಕ ಭದ್ರತೆಯಲ್ಲಿ ಬ್ರಿಟನ್ ಅಗ್ರಗಣ್ಯ ದೇಶವಾಗಿ
ಹುಟ್ಟಿನಿಂದ ಸಾವಿನವರೆಗೆ ನಮ್ಮನ್ನು ಕಾಡಿಸುವ ಅಭದ್ರತೆ
ವಿರುದ್ಧ ಬ್ರಿಟಿಶ್ ಸರಕಾರವು ಯೋಜನೆಗಳನ್ನು ಹೊಂದಿ
ಹೆರಿಗೆ ಸಹಾಯ, ಜೀವ-ವಿಮೆ, ಔದ್ಯೋಗಿಕ ಗಾಯದಲ್ಲಿ ಸಹಾ
ನಿರುದ್ಯೋಗ ವಿಮೆ, ತಾಯ್ತನದ ಭತ್ಯೆ, ೫೫ನೆಯ ವಯಸ್ಸಿ
ನೀಡುವ ನಿವೃತ್ತಿವೇತನ, ಸಾರ್ವತ್ರಿಕ ಆರೋಗ್ಯ ವಿ
ರಾಷ್ಟ್ರೀಯ ವಿಮಾ ಯೋಜನೆ – ಹೀಗೆ ವಿವಿಧ ಯೋಜನೆಗಳ
ಹೆಣೆದುಕೊಂಡು ತನ್ನ ರಾಷ್ಟ್ರೀಯ ವರಮಾನದ ೧೨%
ಇಂತಹ ಯೋಜನೆಗಳಿಗಾಗಿ ಖರ್ಚು ಮಾಡುತ್ತದೆ. ಸಾಮಾ
ಭದ್ರತೆಯ ಕ್ಷೇತ್ರದಲ್ಲಿ ಅತ್ಯಂತ ಪ್ರಸಿದ್ಧವಾದ 'ಬೆವರಿಜ್ ವರ
೧೯೪೨ರಲ್ಲಿ ಪ್ರಕಟವಾಯಿತು. ಸರ್ ಬೆವರಿಜ್‌ರ ಪ್ರಕಾರ ಆಧು

ಗತ್ತಿನ ಅತಿ ದೊಡ್ಡ ಸಮಸ್ಯೆಯೆಂದರೆ ದುಡಿಯಲು ಸಾಧ್ಯ ಾಗದೆ ಇರುವುದು. ಇದರ ಮೂಲವನ್ನೇ ಸರಿಪಡಿಸುವುದು ರಕಾರದ ಉದ್ದೇಶವಾಗಿರಬೇಕೆಂದು ಅವರು ಪ್ರತಿಪಾದಿಸಿದರು. ಭಾವ, ಅನಾರೋಗ್ಯ, ಅಜ್ಞಾನ, ಅನೈರ್ಮಲ್ಯ ಮತ್ತು ಆಲಸೀ ನಗಳ ವಿರುದ್ಧ ಹೋರಾಡಲು ವಿವಿಧ ಭದ್ರತಾ ಕಾರ್ಯಕ್ರಮ ಳನ್ನು ಅವರು ಸೂಚಿಸಿದರು. ಬಿವರಿಜ್ ವರದಿಯಿಂದ ಪ್ರಭಾ ತವಾಗದ ದೇಶವೇ ಇಲ್ಲ. ನಮ್ಮ ದೇಶದ ಯೋಜಕರು ಇದ ಂದ ತುಂಬಾ ಸ್ಫೂರ್ತಿಯನ್ನು ಪಡೆದಿದ್ದಾರೆನ್ನಬೇಕು.

ಮೇರಿಕಾ :

ಬಂಡವಾಳಶಾಹಿಯೆನ್ನಿಸಿಕೊಳ್ಳುವ ಅಮೇರಿಕೆಯ ಸಂಯುಕ್ತ ಂಸ್ಥಾನವು ತನ್ನ ರಾಷ್ಟ್ರೀಯ ಆದಾಯದ ಶೇಕಡಾ ೬ ಭಾಗವನ್ನು ಾಮಾಜಿಕ ಭದ್ರತೆಯ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸು ದೆ. ಸುಮಾರು ಮೂವತ್ತು ವರ್ಷಗಳ ಹಿಂದೆ ಅಲ್ಲಿ ಹೇಳಿಕೊಳ್ಳು ಂಥ ಯಾವ ಕಾರ್ಯಕ್ರಮಗಳೂ ಇರಲಿಲ್ಲ. ಆದರೆ ಅಲ್ಲಿಂದೀಚೆ ಷ್ಟ್ರವ್ಯಾಪಕವಾದ ಯೋಜನೆಗಳನ್ನು ಆ ಸರಕಾರ ಹೆಣೆದು ೊಂಡಿದೆ. ಹೆಚ್ಚು ಸ್ವಾತಂತ್ರ್ಯಪ್ರಿಯರಾದ ಅಮೇರಿಕನ್ನರು ಾಮಾಜಿಕ ಸಹಾಯವನ್ನು ಅಷ್ಟಾಗಿ ಮೆಚ್ಚಿಕೊಂಡಿಲ್ಲ. ಅಲ್ಲಿ ಾಮಾಜಿಕ ವಿಮಾಯೋಜನೆಗಳೇ ಪ್ರಚಾರದಲ್ಲಿವೆ. ೬೫ ವರ್ಷ ಯಸ್ಸನ್ನು ಮುಟ್ಟಿದ ನಿವೃತ್ತರಿಗೆ, ವಾರಸುದಾರರಿಗೆ, ಆಶ್ರಿತ ಗೆ, ವಿಧವೆಯರಿಗೆ ಹಾಗೂ ದುಡಿಯಲು ಅಸಮರ್ಥರಾದವರಿಗೆ ಹಾಯ ಸಿಗುತ್ತದೆ. ನಿರುದ್ಯೋಗ ವಿಮೆಯೂ ವ್ಯಾಪಕವಾಗಿ ಳಕೆಯಲ್ಲಿದೆ.

ಕೆನಡಾ :

ಕೆನಡಾದಲ್ಲಿ ಪ್ರಚಲಿತವಿರುವ ಮುಖ್ಯ ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳೆಂದರೆ ಇವು : ಕುಟುಂಬದ ಭತ್ಯೆ, ವೃದ್ಧಾಪ್ಯದ ಪಿಂಚಣಿ, ನಿರುದ್ಯೋಗ ವಿಮೆ, ಹದಿನಾರು ವರ್ಷಕ್ಕೂ ಮಿಕ್ಕದ ಮಕ್ಕಳಿಗೆ ಕೊಡುವ ಭತ್ಯೆ, ದುಡಿಯಲು ಅಸಮರ್ಥರಾದವರಿಗೆ ಮಾಸಿಕ ವೇತನ, ಕಾರ್ಮಿಕ ಪರಿಹಾರ ಇತ್ಯಾದಿ.

ಹಾಲಂಡ್ :

ಹಾಲಂಡ್ ದೇಶವು ಈ ದಿಸೆಯಲ್ಲಿ ಅಗ್ರಗಾಮಿಯಾದ ಇನ್ನೊಂದು ದೇಶ. ಔದ್ಯೋಗಿಕ ಗಾಯದಲ್ಲಿ ಸಹಾಯ, ನಿರುದ್ಯೋಗ ವಿಮೆ, ವೃದ್ಧಾಪ್ಯ ಸೌಲಭ್ಯ, ಕಾಹಿಲೆ ಬಿದ್ದಾಗ ಸಹಾಯ, ಮಕ್ಕಳ ಭತ್ಯೆಗಳಂತಹ ಅನೇಕ ಯೋಜನೆಗಳು ಜಾರಿಯಲ್ಲಿವೆ. ಆ ದೇಶವು ತನ್ನ ಒಟ್ಟು ಆದಾಯದ ಸುಮಾರು ೧೦-೧೨% ವನ್ನು ಈ ಕಾರ್ಯಕ್ರಮಗಳಿಗಾಗಿ ವೆಚ್ಚ ಮಾಡುತ್ತದೆ.

ಸೋವಿಯಟ್ ರಷ್ಯಾ :

ಸೋವಿಯಟ್ ದೇಶದ ಜನರು ತಮ್ಮ ವಿಮಾಯೋಜನೆಗಳಿಗಾಗಿ ಪ್ರತ್ಯೇಕವಾಗಿ ವಂತಿಗೆ ಸಲ್ಲಿಸುವುದಿಲ್ಲ. ಹೀಗಾಗಿ ಇವುಗಳನ್ನು ವಿಮಾಯೋಜನೆಗಳೆನ್ನದೆ ಸಾಮಾಜಿಕ ಸಹಾಯ ಯೋಜನೆಗಳೆನ್ನುವುದೆ ಹೆಚ್ಚು ಸಮಂಜಸವಾದೀತು. ಏನಿದ್ದರೂ ಅಲ್ಲಿ ಹೆಚ್ಚು

ಕಡಿಮೆ ಎಲ್ಲ ದುಡಿಯುವ ಜನರು ಸರಕಾರದಿಂದ ಒಂದಲ್ಲ ಒಂದು ರೀತಿಯ ಭದ್ರತೆಯ ಸೌಲಭ್ಯವನ್ನು ಪಡೆದೇ ಪಡೆಯುತ್ತಾರೆ. ಸರ್ವವ್ಯಾಪಿಯಾದ ಪಿಂಚಣಿ ಪದ್ಧತಿ ಇದೆ. ಸುಮಾರು ಐವತ್ತು-ಲಕ್ಷ ತಾಯಂದಿರು ಮಕ್ಕಳಿಗಾಗಿ ಸಹಾಯಧನವನ್ನು ಪಡೆಯುತ್ತಾರೆ. ರೈತರು, ನೌಕರರು, ಶ್ರಮಿಕರು ತಮ್ಮ ಸಂಕಟಕಾಲದಲ್ಲಿ ಸಹಾಯ ಪಡೆಯುತ್ತಾರೆ. ವೃದ್ಧಾಪ್ಯದಲ್ಲಿ, ಅಂಗವಿಕಲರಾದಾಗ, ಅಸಮರ್ಥರಾದಾಗ, ಕುಟುಂಬದ ಯಜಮಾನ ಸತ್ತಾಗ, ಹೆರಿಗೆ-ಬಾಣಂತಿತನದ ಅವಧಿಯಲ್ಲಿ, ಔಷಧ-ಉಪಚಾರ ಬೇಕಾದಾಗ ಹೀಗೆ ನಾನಾ ಪ್ರಸಂಗಗಳಲ್ಲಿ ಸರಕಾರವು ಪ್ರಜೆಗಳ ಸಹಾಯಕ್ಕೆ ಬರುತ್ತದೆ.

ಜನತಾ ಚೀಣಾ :

ಕಮ್ಯುನಿಸ್ಟ್ ಚೀಣಾದಲ್ಲಿರುವ ಭದ್ರತಾ ಮಾರ್ಗಗಳು ಇತರ ದೇಶಗಳ ಭದ್ರತಾ ಮಾರ್ಗಗಳಿಗಿಂತ ಸ್ವಲ್ಪ ಭಿನ್ನವಾಗಿವೆ. ಆ ದೇಶದ ಅಂಕಿ-ಸಂಖ್ಯೆಗಳು ನಮಗೆ ಅಷ್ಟು ಸಮರ್ಪಕವಾಗಿ ದೊರಕುತ್ತಿಲ್ಲ. ಆದರೂ ಅಲ್ಲಿನ ಕಾರ್ಯಕ್ರಮಗಳ ಸ್ಥೂಲ ರೂಪ ಹೀಗಿದೆ :

ಜನತಾ ಚೀಣಾದ ಸಂವಿಧಾನದ ಪ್ರಕಾರ ಪ್ರತಿಯೊಬ್ಬ ಕೆಲಸಗಾರನಿಗೂ ವೃದ್ಧಾಪ್ಯದಲ್ಲಿ, ಅನಾರೋಗ್ಯದ ಸಮಯದಲ್ಲಿ ಹಾಗೂ ದೈಹಿಕ ಅಸಮರ್ಥತೆಯಲ್ಲಿ ಸರಕಾರದಿಂದ ಸಹಾಯ ಪಡೆಯುವ ಅಧಿಕಾರವಿದೆ. ಇದರಿಂದಾಗಿ ಸಾಮಾಜಿಕ ವಿಮೆ

ಯನ್ನೂ, ಸಾಮಾಜಿಕ ಸಹಾಯವನ್ನೂ ಸಾರ್ವಜನಿಕ ಆರೋಗ್ಯ ಸೇವೆಗಳನ್ನೂ ಸರಕಾರವು ಎಲ್ಲಾ ಜನರಿಗೂ ವಿಸ್ತರಿಸಿದೆ. ಕಾರ್ಮಿಕರಿಗಾಗಿ ಇರುವ ವಿಮಾ ನಿಯಮಗಳ ಪ್ರಕಾರ ವ್ಯಕ್ತಿಯ ಆವಶ್ಯಕತೆಗಳನ್ನು ಲೆಕ್ಕಹಾಕಿ ಅವನಿಗೆ ಸಹಾಯ ಕೊಡಲಾಗುತ್ತದೆ. ಉದಾಹರಣೆಗಾಗಿ, ಅಂಗಾಂಗಗಳನ್ನು ಕಳೆದುಕೊಂಡ ಒಬ್ಬ ಕಾರ್ಮಿಕನು ಎಷ್ಟು ವಂತಿಗೆಯನ್ನು ಸಲ್ಲಿಸಿದ್ದಾನೆಂದು ಲೆಕ್ಕಹಾಕುವುದಿಲ್ಲ. ಅವನ ಜೀವನಾವಶ್ಯಕತೆಗಳ ಲೆಕ್ಕಹಾಕಿ ಅವನಿಗೆ ಸಿಗುವ ಮಾಸಿಕ ವೇತನವನ್ನು ನಿರ್ಧರಿಸುತ್ತಾರೆ. ಯಾವ ಕೆಲಸಗಾರನೂ ವಂತಿಗೆ ಕೊಡಬೇಕಾಗಿಲ್ಲ. ಆತನನ್ನು ಕೆಲಸಕ್ಕಿಟ್ಟುಕೊಂಡ ಸರಕಾರಿ ಖಾತೆಯಾಗಲೀ ಅಥವಾ ಖಾಸಗಿ ಸಂಸ್ಥೆಯಾಗಲೀ ಪೂರ್ಣವಾಗಿ ಈ ವಂತಿಗೆಯನ್ನು ಕೊಡಬೇಕಾಗುತ್ತದೆ. ಪ್ರತಿತಿಂಗಳೂ ಒಟ್ಟು ವೇತನದ ೩% ನ್ನು ವಿಮಾನಿಧಿಗೆ ಇವರು ಸಲ್ಲಿಸುತ್ತಾರೆ. ಇದರಲ್ಲಿ ಒಂದು ಭಾಗವನ್ನು ಕೇಂದ್ರ ಸರಕಾರವು ನಡೆಸುವ ಆರೋಗ್ಯಧಾಮ, ವಿಶ್ರಾಂತಿಧಾಮ ಇತ್ಯಾದಿ ಸಂಸ್ಥೆಗಳಿಗಾಗಿ ಕೊಡುತ್ತಾರೆ. ಉಳಿದುದನ್ನು ಕ್ಷೇಮನಿಧಿ, ಪಿಂಚಣಿ, ಭತ್ಯೆ ಮತ್ತು ಪರಿಹಾರಧನಗಳನ್ನು ಕೊಡಲು ಬಳಸುತ್ತಾರೆ, ಸಾಧಾರಣವಾಗಿ ಎಲ್ಲ ತರದ ಗಂಡಾಂತರಗಳಲ್ಲಿಯೂ ವ್ಯಕ್ತಿಗೆ ಅಭಯ ಸಿಗುತ್ತದೆ. ಮಾದರಿ ಕೆಲಸಗಾರನಿಗಾಗಿ ಈ ಯೋಜನೆಗಳು ವಿಶೇಷ ಸೌಲಭ್ಯಗಳನ್ನು ನೀಡುತ್ತವೆ. ಸಾಮಾನ್ಯವಾಗಿ ಎಲ್ಲಾ ಕೆಲಸಗಾರರು ಕೂಲಿಕಾರ ಸಂಘಗಳ ಸದಸ್ಯರಿರುತ್ತಾರೆ ಮತ್ತು ವಿಮಾಯೋಜನೆಗಳಲ್ಲಿ ಸೇರಿರುತ್ತಾರೆ. ಸಂಘಗಳನ್ನು ಸೇರದಿರುವ ಕೆಲವರು ಕೂಡ ವಿಮಾಯೋಜನೆಗೆ ಸೇರಬಹುದು. ಆದರೆ ಅಂಥವರಿಗೆ ಉಳಿದವರಿಗಿಂತ ಕಡಿಮೆ

ಸೌಲಭ್ಯಗಳು ಸಿಗುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಇತರ ಮುಂದುವರಿದ ದೇಶಗಳಲ್ಲಿರುವ ಎಲ್ಲ ಭದ್ರತೋಪಾಯಗಳೂ ಜನತಾ ಚೀಣಾದಲ್ಲಿ ಇವೆ. ಅವುಗಳ ನಿರ್ವಹಣೆಯು ಮಾತ್ರ ಸ್ವಲ್ಪ ಭಿನ್ನವಾಗಿದೆ.

ಹೀಗೆ ಜಗತ್ತಿನ ವಿವಿಧ ರಾಷ್ಟ್ರಗಳು ತಮ್ಮ ಪ್ರಜೆಗಳ ಅಭದ್ರ ಪರಿಸ್ಥಿತಿಯಲ್ಲಿ ಸಹಾಯ ಮಾಡುತ್ತವೆ. ೧೯೬೦ರ ಹೊತ್ತಿಗೆ ವಿಶ್ವದ ೭೭ ರಾಷ್ಟ್ರಗಳಲ್ಲಿ ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳಿದ್ದವು. ಕೆಲವು ಆಯ್ದ ರಾಷ್ಟ್ರಗಳು ಈ ಕಾರ್ಯಕ್ರಮಗಳಿಗಾಗಿ ವೆಚ್ಚ ಮಾಡುತ್ತಿದ್ದ ಪ್ರಮಾಣವು ಹೀಗಿದೆ:

ಸಮಾಜ ಸಂರಕ್ಷಣೆಯ ವೆಚ್ಚಗಳು

(ರಾಷ್ಟ್ರೀಯ ವರಮಾನದ ಶೇಕಡಾ ಭಾಗ)

(1)	ಪಶ್ಚಿಮ ಜರ್ಮನಿ	...	...	20.8%
(2)	ಫ್ರಾನ್ಸ್	...	...	18.9%
(3)	ಸ್ವೀಡನ್	...	...	12.9%
(4)	ಇಂಗ್ಲೆಂಡ್	...	...	12.1%
(5)	ಡೆನ್ಮಾರ್ಕ್	...	...	12.0%

(6)	ಅಮೇರಿಕಾ	... ...	6.0%
(7)	ಜಪಾನ್	... ...	5.8%
(8)	ಭಾರತ	... ...	1.0%
(9)	ಸೋವಿಯಟ್ ರಷ್ಯಾ	... ...	10–15% (ಅಂದಾಜು)
(10)	ಜನತಾ ಚೀಣಾ	... ...	12–16% (ಅಂದಾಜು)

ಅಧ್ಯಾಯ – ೬

ವಿಶ್ವಸಂಸ್ಥೆ ಮತ್ತು ಸಾಮಾಜಿಕ ಭದ್ರತೆ :

ಸಾಮಾಜಿಕ ಭದ್ರತೆಯ ಚಳವಳಿಯಲ್ಲಿ ವಿಶ್ವಸಂಸ್ಥೆಯು ಕಳೆದ ಅನೇಕ ವರ್ಷಗಳಿಂದ ಮಹತ್ವದ ಪಾತ್ರವನ್ನು ವಹಿಸಿದೆ. ಇದರ ಅಂಗಸಂಸ್ಥೆಯಾದ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (I. L. O.) ಈ ದಿಸೆಯಲ್ಲಿ ಪ್ರೋತ್ಸಾಹವನ್ನೂ ಮಾರ್ಗದರ್ಶನವನ್ನೂ ನೀಡಿದೆ. ಅದನ್ನಿಲ್ಲಿ ಸ್ಥೂಲವಾಗಿ ಚರ್ಚಿಸೋಣ.

ಈಗ ಅನೇಕ ವರ್ಷಗಳಿಂದ ವಿಶ್ವಸಂಸ್ಥೆಯು ನಾಗರಿಕ ದೇಶಗಳ ಎಲ್ಲ ಜನರಿಗೂ ಸಾಮಾಜಿಕ ಭದ್ರತೆ ಸಿಗಬೇಕೆಂದು ಪ್ರತಿಪಾದಿಸುತ್ತ ಬಂದಿದೆ. ಈ ಶತಮಾನದ ನಾಲ್ಕನೆಯ ದಶಕದಲ್ಲಿ ಬಲವಾದ ಆರ್ಥಿಕ ಮುಗ್ಗಟ್ಟು ಅನೇಕ ದೇಶಗಳನ್ನು ಆವರಿಸಿದಾಗ ಈ ಪ್ರತಿಪಾದನೆಗೆ ಮತ್ತಿಷ್ಟು ಪುಷ್ಟಿ ದೊರೆಯಿತು. ಎಲ್ಲ ದೇಶಗಳೂ ಸಾಮಾನ್ಯ ನಿಯಮಗಳನ್ನೂ ಪ್ರಮಾಣಗಳನ್ನೂ ಒಪ್ಪಬೇಕೆಂದು ವಿಶ್ವಸಂಸ್ಥೆ ಒತ್ತಾಯ ಹೇರಿತು. ೧೯೪೪ ರಲ್ಲಿ ಫಿಲಡೆಲ್ಫಿಯಾದಲ್ಲಿ ನಡೆದ ಸಭೆಯಿಂದೀಚೆಗೆ ಅನೇಕ ಗೋಷ್ಠಿಗಳೂ ಸಮ್ಮೇಳನಗಳೂ ಈ ವಿಷಯದ ಬಗ್ಗೆ ಚರ್ಚಿಸಿವೆ. ಮುಂದೆ

೧೯೫೨ರಲ್ಲಿ ಸಾಮಾಜಿಕ ಭದ್ರತೆಯ ಬಗ್ಗೆ ಅಂತರರಾಷ್ಟ್ರೀಯ ಕನಿಷ್ಠ ಪ್ರಮಾಣ ಒಡಂಬಡಿಕೆ (International Minimum Standards Convention) ಯೊಂದನ್ನು ಸಾಧಿಸಲಾಯಿತು. ಜಗತ್ತಿನ ರಾಷ್ಟ್ರಗಳೆಲ್ಲ ಈ ಪ್ರಮಾಣವನ್ನು ಒಪ್ಪಬೇಕೆಂದು ಒತ್ತಾಯಿಸಲಾಗಿದೆ. ಈ ಒಡಂಬಡಿಕೆಯಲ್ಲಿ ಸಂಕಟದಲ್ಲಿರುವ ವ್ಯಕ್ತಿಗೆ ಸಿಗಬೇಕಾದ ಅನೇಕ ಭದ್ರತೆಗಳು ಸೇರಿವೆ. ಅವೆಂದರೆ –

೧. ಔಷಧೋಪಚಾರ. ೨. ಅನಾರೋಗ್ಯವಿಮೆ ೩. ಕಾಹಿಲೆಯಲ್ಲಿ ಸಿಗುವ ನಗದು ಸಹಾಯ. ೪. ನಿರುದ್ಯೋಗ ಭತ್ಯೆ. ೫. ವೃದ್ಧಾಪ್ಯದಲ್ಲಿ ಸಿಗುವ ಸಹಾಯ. ೬. ಕಾರ್ಮಿಕರ ಪರಿಹಾರ ಧನ. ೭. ಕುಟುಂಬ ಭತ್ಯೆ. ೮. ಮಾತೃತ್ವ ಸಹಾಯಧನ. ೯. ಅಶಕ್ತತಾ ಪಿಂಚಣಿ. ೧೦. ಆಶ್ರಿತರಿಗೆ ಸಿಗುವ ಪಿಂಚಣಿ.

ಈ ವಿಷಯಗಳ ಬಗ್ಗೆ ಎಲ್ಲ ರಾಷ್ಟ್ರಗಳೂ ಸಾಮಾನ್ಯವಾದ ಕನಿಷ್ಠ ಪ್ರಮಾಣದ ಸವಲತ್ತುಗಳನ್ನು ತಮ್ಮ ರಾಷ್ಟ್ರಿಕರಿಗೆ ನೀಡಬೇಕೆಂದು ಕರೆ ಕೊಡಲಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದುರ್ಬಲ ರಾಷ್ಟ್ರಗಳು ಕೆಲವೊಂದು ವಿನಾಯಿತಿಗಳನ್ನು ಕೇಳಬಹುದು. ಆದರೆ ಈ ವಿನಾಯಿತಿಗಳು ಕೇವಲ ಹತ್ತು ವರ್ಷಗಳಿಗೆ ಮಾತ್ರ ಅನ್ವಯಿಸಬೇಕೆಂದೂ ಮುಂದೆ ಎಲ್ಲ ರಾಷ್ಟ್ರಗಳೂ ಕನಿಷ್ಠ ಪ್ರಮಾಣವನ್ನು ಸಾಧಿಸಲೇಬೇಕೆಂದೂ ವಿಶ್ವಸಂಸ್ಥೆ ಒತ್ತಾಯ ಮಾಡಿದೆ. ಸದಸ್ಯ ರಾಷ್ಟ್ರಗಳು ಸಾಧಿಸಿದ ಪ್ರಗತಿಯ ಬಗ್ಗೆ ಅದು ಪ್ರತಿವರ್ಷ ಸಮೀಕ್ಷೆಗಳನ್ನು ನಡೆಸಿ ವರದಿಯನ್ನು ಸಿದ್ಧಪಡಿಸುತ್ತದೆ; ಅಲ್ಲದೆ ಸಲಹೆ ಸೂಚನೆಗಳನ್ನು ಕೊಡುತ್ತದೆ. ಈ ಸಂದರ್ಭದಲ್ಲಿ ಭಾರತವು ಅನಾರೋಗ್ಯ, ಮಾತೃತ್ವ, ಅಂಗವೈಕಲ್ಯ

ವೃದ್ಧಾಪ್ಯ ಮೊದಲಾದ ಸಂದರ್ಭಗಳಲ್ಲಿ ಭದ್ರತೆಯನ್ನು ಒದಗಿಸಲು ಸಾಕಷ್ಟು ಶ್ರಮಿಸಿದೆ ಎಂದು ಹೇಳಬಹುದು.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮಾನ್ಯ ಮಾಡಿದ ಸಾಮಾಜಿಕ ಭದ್ರತೆಯ ಕನಿಷ್ಠ ಪ್ರಮಾಣಗಳನ್ನು ಸಾರಾಂಶರೂಪವಾಗಿ ಮುಂದಿನ ಪುಟಗಳಲ್ಲಿ ಕೊಡಲಾಗಿದೆ.

೧ ಸಂದರ್ಭ	೨ ವ್ಯಾಪ್ತಿ	೩ ಪರತ್ತು	೪ ಪ್ರಮಾಣ	೫ ಅವಧಿ
೧. ಔಷಧೋಪಚಾರ				
ವಿಮಾದಾರ ಮತ್ತು ಹೆಂಡತಿ ಮಕ್ಕಳಿಗೆ ಚಿಕಿತ್ಸೆ ಬೇಕಾದಾಗ.	ದೇಶವಾಸಿಗಳಲ್ಲಿ ಕನಿಷ್ಠ ೨೦%	ವಿಮೆ ಕೊಡುವತನಕ, ಉದ್ಯೋಗದಲ್ಲಿರು-ವಾಗ.	ಚಿಕಿತ್ಸೆಗೆ ಸಾಧಾರಣವಾಗಿ ಬೇಕಾಗುವ ಪೂರ್ಣ ಖರ್ಚು	೨೬ ವಾರಗಳು
೨. ಅನಾರೋಗ್ಯ ಭತ್ಯೆ				
ಅನಾರೋಗ್ಯದಿಂದ ಕೆಲಸ ಮಾಡದಂತೆ ಆದಾಗ	,,	,,	ಸರಾಸರಿ ಆದಾಯದ ೪೦%	,,
೩. ನಿರುದ್ಯೋಗ ಭತ್ಯೆ				
ಸಶಕ್ತರಿಗೆ ಉದ್ಯೋಗ ಇಲ್ಲದಿರುವಾಗ	ಉದ್ಯೋಗಿಗಳಲ್ಲಿ ೫೦%	,,	,,	ಸುಮಾರು ೧೫೦ ದಿನಗಳು

೪. ವೃದ್ಧಾಪ್ಯ ಪಿಂಚಣಿ ೬೫ನೆಯ ವಯಸ್ಸಿನಲ್ಲಿ ಮತ್ತು ನಿವೃತ್ತರಾದಾಗ	ದೇಶವಾಸಿಗಳಲ್ಲಿ ೩೦%	೩೦ ವರ್ಷಗಳ ವಂತಿಗೆ ಸಲ್ಲಿಸಿದವರಿಗೆ ಅಥವಾ ೨೦ ವರ್ಷದಿಂದಲೂ ವಾಸಮಾಡಿದವರಿಗೆ	ಸರಾಸರಿ ಆದಾಯದ ೩೦%	ಜೀವಾವಧಿ
೫. ಉದ್ಯೋಗ ಉದ್ಯೋಗದಲ್ಲಿ ಇರುವಾಗ ಊನಗೊಂಡವರಿಗೆ ಸಹಾಯ	ಉದ್ಯೋಗಿಗಳಲ್ಲಿ ೫೦%	ಉದ್ಯೋಗದಲ್ಲಿರುವಾಗ ಊನಗೊಂಡರೆ ಮಾತ್ರ	ಚಿಕಿತ್ಸೆಯ ಪೂರ್ಣ ಖರ್ಚು; ಅನಾರೋಗ್ಯ ಚಿಕಿತ್ಸೆ ಮತ್ತು ಆಶ್ರಿತರಿಗೆ ಸಿಗುವ ಎಲ್ಲ ಸಹಾಯ	ಸಂಪೂರ್ಣ ಲಾಭದ ಅವಧಿ
೬. ಕುಟುಂಬದ ಭತ್ಯೆ ಇಬ್ಬರು ಅಥವಾ ಹೆಚ್ಚು ಮಕ್ಕಳಿರುವವರಿಗೆ	ದೇಶವಾಸಿಗಳಲ್ಲಿ ೨೦%	೩ ತಿಂಗಳುಕಾಲ ವಂತಿಗೆ ಸಲ್ಲಿಸಿದರೆ ಅಥವಾ ಉದ್ಯೋಗದಲ್ಲಿದ್ದರೆ	ಎರಡನೆಯ ಮಗುವಿನಿಂದ ಹಿಡಿದು ಪ್ರತಿ ಮಗುವಿಗೆ ಸರಾಸರಿ ಆದಾಯದ ೫%	ವಿದ್ಯೆಯ ಅವಧಿ ಮುಗಿಯುವ ವರೆಗೆ

೧	೨	೩	೪	೫
೭. ಮಾತೃತ್ವ ಸೌಲಭ್ಯ				
ಕೆಲಸ ಮಾಡುವ ತಾಯಿಗೆ ಹಾಗೂ ಕೆಲಸಗಾರನ ಹೆಂಡತಿಗೆ ಹೆರಿಗೆ - ಬಾಣಂತಿತನದಲ್ಲಿ	,,	ವಿಮೆ ಕೊಡುತ್ತಿದ್ದರೆ ಉದ್ಯೋಗದಲ್ಲಿದ್ದರೆ	ಸರಾಸರಿ ಆದಾಯದ ೪೦% ಮತ್ತು ಚಿಕಿತ್ಸೆಯ ವೆಚ್ಚ	೧೨ ವಾರಗಳ ತನಕ
೮. ಅಶಕ್ತತಾ ಪಿಂಚಣಿ				
ಕೆಲಸ ಮಾಡದಂತೆ ಪೂರ್ಣವಾಗಿ ಅಶಕ್ತರಾದಾಗ.	,,	೫ ವರ್ಷ ವಂತಿಗೆ ಅಥವಾ ಉದ್ಯೋಗ ಅಥವಾ ೧೦ ವರ್ಷ ವಾಸ	ಸರಾಸರಿ ಆದಾಯದ ೩೦%	ಅಶಕ್ತತೆಯ ಪೂರ್ಣ ಅವಧಿ
೯. ಆಶ್ರಿತರ ಪಿಂಚಣಿ				
ವಿಧವೆ ಅಥವಾ ಅನಾಥ ಮಕ್ಕಳಿಗೆ.	,,	,,	,,	ವಿಧವೆ ಮತ್ತು ಮದುವೆಯಾಗುವ ತನಕ ಅಥವಾ ಮಕ್ಕಳ ವಿದ್ಯೆಯ ಅವಧಿ ಮುಗಿಯುವ ತನಕ

ಅಧ್ಯಾಯ – ೨

ಭಾರತದಲ್ಲಿ ಸಾಮಾಜಿಕ ಭದ್ರತೆಯ ಬೆಳವಣಿಗೆ :

ಪ್ರಾಚೀನ ಭಾರತದ ಸಾಮಾಜಿಕ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನಾವು ಸುದ್ದಿಗಳಿನ್ನಬೇಕು. ಮಹಾನ್ ಸಾಮ್ರಾಜ್ಯಗಳು ಬರುವ ಮೊದಲೇ ಅಲ್ಪ ಸ್ವಲ್ಪವಾದರೂ ಭದ್ರತಾ ವ್ಯವಸ್ಥೆ ಇರುವುದನ್ನು ಕಾಣುತ್ತೇವೆ. ಆ ನಂತರ ಈ ದಿಸೆಯಲ್ಲಿ ಸಾಕಷ್ಟು ಪ್ರಗತಿಯಾಯಿತು. ಪ್ರಜೆಗಳೆಂದರೆ ಮಕ್ಕಳೆಂದು ಭಾವಿಸಬೇಕೆಂಬುದು ರಾಜಧರ್ಮವಾಯಿತು. ರಾಜನು ಅನಾಥರನ್ನೂ, ನಿರ್ಗತಿಕರನ್ನೂ, ವಿಧವೆಯರು ಮತ್ತು ವೃದ್ಧರನ್ನೂ ಸಂರಕ್ಷಿಸಬೇಕೆಂಬ ಬಲವಾದ ಪರಿಪಾಠ ಬೆಳೆದಿತ್ತು. ನಲವತ್ತು ವರ್ಷ ದುಡಿದ ಸೇವಕನು ಸಾಯುವ ತನಕ ಅರ್ಧ ಸಂಬಳಕ್ಕೆ ಹಕ್ಕುದಾರನೆಂದು ಸಾಮಾನ್ಯವಾಗಿ ಭಾವಿಸಲಾಗುತ್ತಿತ್ತು. ವಿಧವೆಯರಿಗೆ ಸಹಾಯ ಸಲ್ಲಿಸುವ ಸಂಪ್ರದಾಯ ಹೆಚ್ಚುಕಡಿಮೆ ಸರ್ವಮಾನ್ಯವಾಗಿತ್ತು. ಅನಾರೋಗ್ಯದ ಕಾಲದಲ್ಲಿ ಕೆಲಸಗಾರನಿಗೆ ಅನೇಕ ಸವಲತ್ತುಗಳು ಸಿಗುತ್ತಿದ್ದವು.

ಮುಂದೆ ಮೊಘಲರ ಆಳ್ವಿಕೆಯಲ್ಲಿ ಇಂಥ ವ್ಯವಸ್ಥೆ ಉಳಿಯಲಿಲ್ಲ. ಆ ನಂತರದ ಕಾಲದಲ್ಲಿ ಉಂಟಾದ ಸಾಮಾಜಿಕ ಸ್ಥಿತ್ಯಂತರ

ದಲ್ಲಿ ಹಿಂದಿನ ವ್ಯವಸ್ಥೆಗಳು ಬುಡಮೇಲಾದವು. ಜಾತಿ, ಸಂಯುಕ್ತ ಕುಟುಂಬ, ಗ್ರಾಮ, ದಾನಧರ್ಮಗಳಿಂದ ಸಿಗುತ್ತಿದ್ದ ಆಶ್ರಯ ಕುಂದಿ ಹೋಯಿತು. ಹೀಗೆ ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಸ್ಥಿತಿ ನಿರಾಶಾದಾಯಕವಾಗಿತ್ತು ಎನ್ನಬೇಕು.

ಬೆಳವಣಿಗೆಯ ಹಂತಗಳು :

ಭಾರತದಲ್ಲಿ ಸಾಮಾಜಿಕ ಭದ್ರತೆಯು ಬೆಳೆದು ಬಂದ ರೀತಿಯನ್ನು ನೋಡಿದರೆ ಸ್ಥೂಲವಾಗಿ ನಾಲ್ಕು ಹಂತಗಳಾಗಿ ಗುರುತಿಸಬಹುದಾಗಿದೆ. ಅವೆಂದರೆ:—

೧. ಪ್ರಾರಂಭದ ಕಾಲ (೧೯೧೮ ರ ತನಕ)

೨. ಚಳುವಳಿಯ ಕಾಲ (೧೯೧೮ರಿಂದ ೧೯೩೯ ರ ತನಕ)

೩. ಯೋಜನೆಯ ಕಾಲ (೧೯೩೯ರಿಂದ ೧೯೪೭ ರ ತನಕ)

೪. ಚಟುವಟಿಕೆಯ ಕಾಲ (೧೯೪೭ ರಿಂದ ಮುಂದೆ)

ಪ್ರಾರಂಭದ ಕಾಲ :

ಜರ್ಮನಿ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಕಳೆದ ಶತಮಾನದ ಕೊನೆಯೊಳಗೆ ಸಾಮಾಜಿಕ ವಿಮೆ ಸಾಕಷ್ಟು ಪ್ರಚಲಿತವಾಗಿತ್ತು. ಆದರೆ ನಮ್ಮಲ್ಲಿ ಸಾಮಾಜಿಕ ಭದ್ರತೆಯು ಸಾಕಷ್ಟು ಪ್ರಗತಿ ಸಾಧಿಸಿದ್ದು ಕಳೆದ ಎರಡು ದಶಕಗಳ ಅವಧಿಯಲ್ಲಿ ಮಾತ್ರ. ಅಲ್ಲದೆ ವಿಶ್ವದ ಇತರ ಅನೇಕ ದೇಶಗಳೊಡನೆ ಹೋಲಿಸಿದರೆ

ಈಗಲೂ ಈ ಚಳುವಳಿ ಇನ್ನೂ ಬಲವಾಗಿ ಬೇರು ಬಿಟ್ಟಿಲ್ಲವೆಂದರೆ ತಪ್ಪಲ್ಲ. ಅದು ತಡವಾಗಿ ಪ್ರಾರಂಭವಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಮುಖ್ಯವಾಗಿ ಈ ಚಳುವಳಿ ಅನ್ವಯಿಸುವುದು ಕೈಗಾರಿಕೆಗಳಲ್ಲಿ ಕೆಲಸಮಾಡುವ ಉದ್ಯೋಗಿಗಳಿಗೆ. ನಮ್ಮ ಕೈಗಾರಿಕೆಗಳು ಬೆಳೆದದ್ದು ತೀರ ಇತ್ತೀಚೆಗೆ. ನಮ್ಮ ಮೊದಲನೆಯ ಗಿರಣಿ ಪ್ರಾರಂಭವಾದದ್ದು ಕಲಕತ್ತೆಯಲ್ಲಿ ೧೮೫೮ ರಲ್ಲಿ. ಆ ಮುಂದಿನ ೬೦-೭೦ ವರ್ಷಗಳಲ್ಲಿ ಕೈಗಾರಿಕೆಗಳು ಅಷ್ಟೇನೂ ತೀವ್ರಗತಿಯಲ್ಲಿ ಬೆಳೆಯಲಿಲ್ಲ. ಮೊದಲನೆಯ ಮಹಾಯುದ್ಧದ ತನಕವೂ ಪರಿಸ್ಥಿತಿ ಹೀಗೆಯೇ ಇತ್ತು. ಈ ಅವಧಿಯಲ್ಲಿ ಕಾರ್ಮಿಕರ ರಕ್ಷಣೆಗಾಗಿ ಅತಿ ಮಹತ್ವದ ಕಾಯ್ದೆ ಕಾನೂನುಗಳು ಬರಲಿಲ್ಲ. ಭದ್ರತೆಯಲ್ಲಿ ಪ್ರಗತಿಯಾಗಲಿಲ್ಲ. ಆದ ಅಲ್ಪ ಸ್ವಲ್ಪ ಪ್ರಗತಿಯನ್ನು ಇಲ್ಲಿ ಸ್ಥೂಲವಾಗಿ ನೋಡಬಹುದು.

೧೮೫೫ರಲ್ಲಿ ಜಾರಿಗೆ ಬಂದ 'ಮಾರಕ ಅಪಘಾತಗಳ ಕಾಯ್ದೆ' (Fatal Incidents Act) ಯೇ ಸಾಮಾಜಿಕ ಭದ್ರತೆಗೆ ಸಂಬಂಧಿಸಿದ ನಮ್ಮ ಪೊಟ್ಟಮೊದಲನೆಯ ಕಾಯ್ದೆ ಎನ್ನಬಹುದು. ಇದರ ಪ್ರಕಾರ ಮಾರಕ ಅಪಘಾತಗಳಿಗೆ ಒಳಗಾದ ಕಾರ್ಮಿಕರಿಗೆ ಅಲ್ಪ ಪ್ರಮಾಣದ ಪರಿಹಾರ ಸಿಗುತ್ತಿತ್ತು. ಆದರೆ ಈ ಪರಿಹಾರ ಪಡೆಯಲು ಕಾರ್ಮಿಕನು ಮಾರಕ ಅಪಘಾತವು ಮಾಲಕನ ತಪ್ಪಿನಿಂದ ಸಂಭವಿಸಿತೆಂದು ರುಜುವಾತು ಮಾಡಬೇಕಾಗಿತ್ತು. ಇದು ಆಗಿನ ಕಾಲದಲ್ಲಿ ಅಸಂಭವನೀಯವೇ ಆಗಿತ್ತು. ಮುಂದೆ ೧೮೮೪ ರಲ್ಲಿ ಈ ಕಾಯ್ದೆ ತಿದ್ದುಪಡೆ ಹೊಂದಿತಾದರೂ ಅದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ.

ಇದರಂತೆಯೇ ಕಾರ್ಖಾನೆಗಳ ಕಾಯ್ದೆ (Factories Act) ಗಣಿಗಳ ಕಾಯ್ದೆ (Mines Act) ಮತ್ತು ಕಾರ್ಮಿಕರ ಕರಾರು ಭಂಗ ಕಾಯ್ದೆ (Workmen's Breach of Contract Act) ಮುಂತಾದ ಕಾಯ್ದೆಗಳು ಬಂದರೂ ಕಾರ್ಮಿಕರಿಗೆ ಸಿಗಬೇಕಾದ ಭದ್ರತೆ ಸಿಗಲಿಲ್ಲ.

ಚಳುವಳಿಯ ಕಾಲ :

ಮುಂದಿನ ಇಪ್ಪತ್ತು ವರ್ಷಗಳ ಕಾಲ (೧೯೧೮ ರಿಂದ ೧೯೩೯ರ ತನಕ) ಬೇರೆ ದೇಶಗಳಲ್ಲಿಯಂತೆ ಭಾರತದಲ್ಲಿಯೂ ಭದ್ರತಾ ಚಳುವಳಿ ಸಾಕಷ್ಟು ಭರದಿಂದ ನಡೆಯಿತು. ಇದಕ್ಕೆ ಕೆಲವು ಕಾರಣಗಳನ್ನು ಹೇಳಬಹುದು.

ಮೊದಲನೆಯದಾಗಿ, ಇದೇ ಅವಧಿಯಲ್ಲಿ ಕೈಗಾರಿಕೆಗಳು ಭರದಿಂದ ಬೆಳೆದವು.

ಎರಡನೆಯದಾಗಿ, ಕಾರ್ಮಿಕರ ತಂಟೆಗಳೂ ಮುಷ್ಕರಗಳೂ ಪ್ರಾರಂಭವಾಗಿ ಅವರ ಸಮಸ್ಯೆಗಳ ಕಡೆಗೆ ಸರಕಾರವು ಗಮನ ಹರಿಸಿತು.

ಮೂರನೆಯದಾಗಿ, ಅಂತರರಾಷ್ಟ್ರೀಯ ಶ್ರಮಸಂಸ್ಥೆಯು ಈ ಕಡೆಗೆ ಹೆಚ್ಚು ಗಮನ ಹರಿಸಿತು.

ನಾಲ್ಕನೆಯದಾಗಿ, ಕಾರ್ಮಿಕ ಸಂಘಟನೆಯು ಹೆಚ್ಚು ವ್ಯವಸ್ಥಿತವಾದುದರಿಂದ ಕೆಲವಾದರೂ ಭದ್ರತೋಪಾಯಗಳು ಅನಿವಾರ್ಯವಾದವು.

ಈ ಅವಧಿಯಲ್ಲಿ ಬಂದ ಒಂದು ಹೆಸರಿಸಬಹುದಾದ ಕಾಯ್ದೆಯೆಂದರೆ 'ಕಾರ್ಮಿಕರ ಪರಿಹಾರ ಕಾಯ್ದೆ' (Workmen's Compensation Act). ೧೯೨೩ ರಲ್ಲಿ ಬಂದ ಈ ಕಾಯ್ದೆಯು ಹಿಂದೆ ಬಂದ ಇಂತಹ ಕಾಯ್ದೆಗಳಿಗಿಂತ ಹೆಚ್ಚು ಪ್ರಗತಿಪರವಾಗಿತ್ತು. ಈ ಕಾಯ್ದೆಯಂತೆ ಕೆಲಸದಲ್ಲಿ ತೊಡಗಿರುವ ಕೆಲಸಗಾರನು ಅಂಗಹೀನನಾದರೆ, ಅಥವಾ ಮರಣ ಹೊಂದಿದರೆ. ಅವನು ಅಥವಾ ಅವನ ಕುಟುಂಬದವರು ಪರಿಹಾರವನ್ನು ಪಡೆಯಬಹುದು. ಈ ಪರಿಹಾರವನ್ನು ಸರಕಾರ ಕೊಡುವುದಿಲ್ಲ. ಅದು ಪೂರ್ಣವಾಗಿ ಮಾಲಕನ ಹೊಣೆಗಾರಿಕೆ. ಇದು ತಾತ್ವಿಕವಾಗಿ ಒಂದು ದಿಟ್ಟ ಹೆಜ್ಜೆಯೆನ್ನಬಹುದಾದರೂ, ಇದರಿಂದ ಕಾರ್ಮಿಕರು ಹೆಚ್ಚು ಪ್ರಯೋಜನ ಪಡೆಯಲಿಲ್ಲ ಎನ್ನುತ್ತಾರೆ. ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ, ಉದ್ದಿಮೆಗಳ ಮಾಲಕರು ತಮ್ಮಲ್ಲಿ ಕೆಲಸ ಮಾಡುವ ಕೆಲಸಗಾರರ ಭದ್ರತೆಯ ಪೂರ್ಣ ಜವಾಬ್ದಾರಿ ಹೊರಲು ಸಿದ್ಧರಿದ್ದಿಲ್ಲ. ಎರಡನೆಯದಾಗಿ, ಪರಿಹಾರವನ್ನು ಕೇಳುವ ಕೆಲಸಗಾರನು ತನಗುಂಟಾದ ಅಪಘಾತವು ಕೆಲಸದಲ್ಲಿ ತೊಡಗಿದಾಗ ಆಗಿದೆಯೆಂದೂ, ಅದು ತನ್ನ ಅಚಾತುರ್ಯದಿಂದ ಸಂಭವಿಸಿಲ್ಲವೆಂದೂ ಸಿದ್ಧಮಾಡಬೇಕಾಗಿತ್ತು. ಹಣ ಮತ್ತು ವರ್ಚಸ್ಸುಗಳಿಲ್ಲದೇ ಕೆಲಸಗಾರರು ಹೀಗೆ ಸಿದ್ಧಮಾಡುವುದು ಅಸಾಧ್ಯವಾಗಿತ್ತು. ಅಲ್ಲದೆ, ಮಾಲಿಕರಿಗೆ ಹೆದರಿಯೋ, ಅಥವಾ ಖಾಸಗಿಯಾಗಿ ಅವರು ಕೊಡುವ ಅಲ್ಪ ಸಹಾಯದಿಂದ ತೃಪ್ತರಾಗಿಯೋ, ಕೆಲಸಗಾರರು ಪರಿಹಾರ ಕಾಯ್ದೆಯ ಪ್ರಕಾರ ತಮಗೆ ಬರಬೇಕಾದ ಸಹಾಯವನ್ನು ಕೇಳುತ್ತಿರಲಿಲ್ಲ. ಇಷ್ಟಲ್ಲದೆ ಸರಕಾರವು

ಮಾಲಿಕರ ಪಕ್ಷಪಾತಿ ಎಂಬ ಶಂಕೆಯೂ ಇತ್ತು. ಹೀಗಾಗಿ ಅ
ಪರಿಹಾರ ಕಾಯ್ದೆ ಅಷ್ಟೇನೂ ಯಶಸ್ವಿಯಾಗಲಿಲ್ಲ.

ಈ ಅವಧಿಯಲ್ಲಿ ಮಾತೃತ್ವ ಸೌಲಭ್ಯಗಳ ಬಗ್ಗೆ ಕೆಲ
ಯೋಜನೆಗಳು ಬಂದವು. ಮುಂಬಯಿ (1929). ಮದ್ರಾಸ
(1934), ದೆಹಲಿ (1937), ಉತ್ತರ ಪ್ರದೇಶ (1938) ಮತ
ಬಂಗಾಲ (1939) ಸರಕಾರಗಳು ಈ ವಿಷಯದ ಬಗ್ಗೆ ಕಾಯ
ಗಳನ್ನು ಜಾರಿಗೆ ತಂದವು.

ಭಾರತದ ಆದ್ಯಂತ ಸಾಮಾಜಿಕ ಭದ್ರತೆಯ ಬಗ್ಗೆ ಅ
ಸ್ವಲ್ಪಾದರೂ ಅರಿವು ಮೂಡಿದ್ದು ಇದೇ ಅವಧಿಯಲ್ಲಿ ಎನ್ನಬೇಕ
ಕಾರ್ಮಿಕರ ಸ್ಥಿತಿಗಳ ಬಗ್ಗೆ ವಿಚಾರಣೆ ಮಾಡಿದ ರಾಯಲ್ ಕಮಿಶನ
ಭಾರತದಲ್ಲಿನ ಸ್ಥಿತಿಯನ್ನು ವಿಮರ್ಶಿಸಿ ಅನೇಕ ಸಲಹೆ ಸೂಚ
ಗಳನ್ನು ಮಾಡಿತು. ಸರಕಾರದಲ್ಲಿ ಹಣವಿಲ್ಲ ಎಂಬ ನೆವದಿಂ
ಅನೇಕ ಸೂಚನೆಗಳು ಕಾರ್ಯಗತವಾಗದೇ ಉಳಿದವು.

ಈ ಅವಧಿಯಲ್ಲಿ ಬೇರೆ ಬೇರೆ ಉದ್ದಿಮೆಗಳಲ್ಲಿ ಹಾಗ
ಗಣಿಗಳಲ್ಲಿ ಕೆಲಸ ಮಾಡುವ ಕೆಲಸಗಾರರ ಕ್ಷೇಮಾಭಿವೃದ್ಧಿಯ
ಬಗ್ಗೆ ವಿವಿಧ ರಾಜ್ಯಗಳು ಕಾಯ್ದೆ ಕಾನೂನುಗಳನ್ನು ಜಾರಿಗೆ ತರು
ಪ್ರಯತ್ನಗಳನ್ನು ಮಾಡಿದ್ದುಂಟು. ಆದರೂ ಇಡೀ ದೇಶಕ್ಕೆ ಅನ
ಯಿಸುವ ಶಾಸನಗಳಾಗಲೀ ಕಾರ್ಯಕ್ರಮಗಳಾಗಲೀ ಬರಲಿಲ್ಲ.

ಯೋಜನೆಯ ಕಾಲ :

೧೯೪೯ ರಿಂದ ೧೯೪೭೭ರ ವರೆಗಿನ ಕಾಲವನ್ನು ಯೋಜನೆಯ
ಕಾಲವೆಂದು ಧಾರಾಳವಾಗಿ ಕರೆಯಬಹುದು. ಮುಂದೆ ನಮ್ಮ

ಾರಿಗೆ ಬಂದ ಅನೇಕ ಕಾರ್ಯಕ್ರಮಗಳನ್ನು ಇದೇ ಅವಧಿಯಲ್ಲಿ ೋಜಿಸಲಾಯಿತು. ಸಾಮಾಜಿಕ ವಿಮೆಯ ಬಗ್ಗೆ ಸಾಕಷ್ಟು ಚಾರ-ವಿಮರ್ಶೆ-ಯೋಜನೆ ನಡೆಯಿತು. ಈ ಅವಧಿಯಲ್ಲಾದ ುಖ್ಯ ಬೆಳವಣಿಗೆಗಳನ್ನು ಇಲ್ಲಿ ಗುರುತಿಸೋಣ:

ಒಂದನೆಯದಾಗಿ, ಪ್ರಸಿದ್ಧವಾದ ಬೆವರಿಜ್ ವರದಿ Beveridge Report) ಪ್ರಕಟವಾಯಿತು. ಈ ವರದಿ ನಮ್ಮ ೇಶದ ಸರಕಾರ ಮತ್ತು ಸಾರ್ವಜನಿಕರ ಮೇಲೆ ತುಂಬಾ ಪ್ರಭಾವ ೀರಿತು. ಅಲ್ಲದೇ ಸಾಮಾಜಿಕ ವಿಮೆಯ ತತ್ವಕ್ಕೆ ಭದ್ರ ಬುನಾದಿ ದಗಿಸಿತು. ಇಂಗ್ಲೆಂಡ್ ದೇಶವನ್ನು ಅನುಸರಿಸಿ ನಾವೂ ಒಂದಿಷ್ಟು ಲಸ ಮಾಡಬೇಕಾದುದು ನಮ್ಮ ಗುರುತರ ಹೊಣೆ ಎಂದು ಮನ ರಿಕೆಯಾಯಿತು.

ಎರಡನೆಯದಾಗಿ, ಕೆಲವರು (ಮುಖ್ಯವಾಗಿ ಆಗ ಪ್ರಗತಿಪರ ದಸ್ಯರಾಗಿದ್ದ ಡಾ. ಅಂಬೇಡಕರರು) ಸಾಮಾಜಿಕ ಭದ್ರತೆಯನ್ನು ಲವಾಗಿ ಪ್ರತಿಪಾದಿಸಿದರು. ಇದರಿಂದಾಗಿ ಅನುಕೂಲ ವಾತಾ-ರಣ ನಿರ್ಮಾಣವಾಯಿತು.

ಮೂರನೆಯದಾಗಿ, ಔದ್ಯೋಗಿಕರಣದ ಪ್ರಗತಿಯೊಂದಿಗೆ ಾರ್ಮಿಕ ಸಂಘಟನೆ ಬಲಗೊಂಡು ಕೆಲವು ಯೋಜನೆಗಳೂ ಕಾರ್ಯ ್ರಮಗಳೂ ಅನಿವಾರ್ಯವಾದವು.

ನಾಲ್ಕನೆಯದಾಗಿ, ಸಾಮಾಜಿಕ ವಿಮೆಯಲ್ಲಿ ಬೇರೆ ದೇಶ ಗಳು ಸಾಧಿಸಿದ ಯಶಸ್ಸಿನಿಂದ ಅದರಲ್ಲಿ ನಮ್ಮವರ ವಿಶ್ವಾಸ ುದುರಿತು.

ಇವುಗಳ ಪರಿಣಾಮವಾಗಿ ನಮ್ಮಲ್ಲಿ ಕಾರ್ಮಿಕ ಮಂತ್ರಿ

ಗಳ ಸಮ್ಮೇಳನಗಳೂ, ವಿಚಾರಣಾ ಸಮಿತಿಗಳೂ ನಿಯೋಜಿತವಾದವು. ಮುಂದೆ ೧೯೪೩ರಲ್ಲಿ ಶ್ರೀ ಬಿ. ಪಿ. ಅಡಾರ್‌ಕರ್ ಅವರ ನೇತೃತ್ವದಲ್ಲಿ ಆರೋಗ್ಯವಿಮೆಯ ಬಗ್ಗೆ ಯೋಜನೆಯೊಂದು ಸಿದ್ಧವಾಯಿತು. ಇದನ್ನು ಒಂದು ಮಹತ್ವದ ಘಟ್ಟವೆಂದು ಕರೆಯಬೇಕು. ಅವರು ಸಾದರ ಪಡಿಸಿದ ವಿಸ್ತೃತ ವರದಿ ಆ ಮೇಲೆ ಬಂದ ವಿಮಾ ಯೋಜನೆಗಳಿಗೆ ತಳಹದಿಯಾಯಿತು.

ಚಟುವಟಿಕೆಯ ಕಾಲ :

ಇತ್ತೀಚೆಗಿನ ಎರಡು ದಶಕಗಳಲ್ಲಿ ಅನೇಕ ಮಹತ್ವದ ಯೋಜನೆಗಳೂ ಕಾರ್ಯಕ್ರಮಗಳೂ ಬಂದಿವೆ. ಚಳುವಳಿ-ಯೋಜನೆಗಳೆಲ್ಲ ಮುಗಿದು ಒಂದೊಂದಾಗಿ ದಿಟ್ಟ ಹೆಜ್ಜೆಗಳನ್ನು ಸ್ವತಂತ್ರ ಭಾರತದ ಸರಕಾರ ಇಡುತ್ತಿದೆ. ಇಲ್ಲಿಯ ಇತಿಮಿತಿಗಳು ಸರ್ವವಿದಿತವಾಗಿವೆ. ಆದರೆ ಸಾಧನೆಗಳನ್ನು ಕಡೆಗಣಿಸುವಂತಿಲ್ಲ. ಅವುಗಳನ್ನು ಮುಂದೆ ಗುರುತಿಸಲಾಗಿದೆ.

ಅಧ್ಯಾಯ – ೮

ಈಚಿಯ ಎರಡು ದಶಕಗಳು :

ಸ್ವಾತಂತ್ರ್ಯದ ನಂತರದ ಎರಡು ದಶಕಗಳಲ್ಲಿ ಬಂದ ಯೋಜನೆಗಳನ್ನೂ ಕಾರ್ಯಕ್ರಮಗಳನ್ನೂ ಇಲ್ಲಿ ನೋಡೋಣ.

(೧) ನೌಕರರ ರಾಜ್ಯ ವಿಮಾ ಯೋಜನೆ (1948) :

ಸ್ವಾತಂತ್ರ್ಯಾನಂತರದ ಕಾಲದಲ್ಲಿ ಈ ದಿಸೆಯಲ್ಲಿ ಇಟ್ಟ ಪ್ರಥಮ ಹೆಜ್ಜೆಯೆಂದರೆ ೧೯೪೮ ರಲ್ಲಿ ಜಾರಿಗೆ ಬಂದ ನೌಕರರ ರಾಜ್ಯ ವಿಮಾ ಯೋಜನೆ. ಈ ಯೋಜನೆಯಂತೆ ೨೦ ನೌಕರರಿರುವ ಉದ್ದಿಮೆಗಳಲ್ಲಿ ವಿಮೆ ಕಡ್ಡಾಯವೆನಿಸುತ್ತದೆ. ಸಧ್ಯ (1968) ತಿಂಗಳಿಗೆ ೫೦೦ ರೂಪಾಯಿಗೂ ಕಡಿಮೆ ಸಂಬಳವಿರುವ ಸುಮಾರು ೩೬ ಲಕ್ಷ ಉದ್ಯೋಗಿಗಳಿಗೆ ಹಾಗೂ ೩೪ ಲಕ್ಷ ವಿಮಾದಾರರ ಕುಟುಂಬಗಳಿಗೆ ಈ ಯೋಜನೆ ಅನ್ವಯಿಸುತ್ತದೆ. ಕೇಂದ್ರ ಸರಕಾರವು ಕೊಡಮಾಡಿದ ಸಹಾಯದೊಂದಿಗೆ ಒಂದು ವಿಮಾ ಕಾರ್ಪೊರೇಶನ್ ಅಸ್ತಿತ್ವಕ್ಕೆ ಬಂದಿದೆ. ಪ್ರತಿಯೊಬ್ಬ ನೌಕರನೂ ಈ ಕಾರ್ಪೊರೇಶನಿಗೆ ಪ್ರತಿ ತಿಂಗಳೂ ನಿಗದಿ ಪಡಿಸಿದ ಮಂತಿಗೆ

ಯನ್ನು ಸಲ್ಲಿಸುತ್ತಾನೆ. ಅಷ್ಟೇ ವಂತಿಗೆಯನ್ನು ಉದ್ದಿಮೆ
ಮಾಲಿಕರೂ ಕೊಡುತ್ತಾರೆ. ಹೀಗೆ ಕೂಡಿದ ನಿಧಿಯಿಂದ ವಂ
ಯನ್ನು ಸಲ್ಲಿಸಿದ ನೌಕರರು ತಮ್ಮ ಕಾಹಿಲೆ, ಹೆರಿಗೆ, ಔದ್ಯೋ
ಗಾಯಗಳಂತಹ ಆಕಸ್ಮಿಕಗಳಲ್ಲಿ ರಕ್ಷಣೆಯನ್ನು ಪಡೆಯುತ್ತಾ
ಔಷಧೋಪಚಾರಕ್ಕೂ ನಿಧಿಯಿಂದ ಸಹಾಯ ಪಡೆಯಬಹುದ
ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯ ವಿಮ
ಯೋಜನೆಯನ್ನು ಹತ್ತು ಜನ ನೌಕರರಿರುವ ಅಂಗಡಿ, ವಾಣಿ
ಸಂಸ್ಥೆ, ಕೈಗಾರಿಕೆಗಳಿಗೆಲ್ಲ ವಿಸ್ತರಿಸಲು ಉದ್ದೇಶಿಸಲಾಗಿದೆ.

(೨) ಕಲ್ಲಿದ್ದಲು ಗಣಿ ನೌಕರರ ಕ್ಷೇಮನಿಧಿ (1948) :

ಅದೇ ವರ್ಷ, ಅಂದರೆ ೧೯೪೮ ರಲ್ಲಿ, ಕಲ್ಲಿದ್ದಲು ಗ
ನೌಕರರಿಗೆ ಪ್ರತ್ಯೇಕವಾದ ಒಂದು ಕ್ಷೇಮನಿಧಿಯನ್ನು ಸ್ಥಾಪಿ
ಲಾಯಿತು. ಸಧ್ಯ ಈ ಕ್ಷೇಮನಿಧಿಯು ೧೨೯೬ ಗಣಿಗಳಲ್ಲಿರು
ಸುಮಾರು ೪ ಲಕ್ಷ ಉದ್ಯೋಗಿಗಳಿಗೆ ಭದ್ರತೆಯನ್ನು ಒದಗಿಸ
ತ್ತದೆ. ಉದ್ಯೋಗಿಗಳು ತಮ್ಮ ಸಂಬಳದ ೮%ನ್ನು ನಿಧಿ
ಕೊಡುತ್ತಾರೆ. ಅಷ್ಟೇ ವಂತಿಗೆಯನ್ನು ಮಾಲಕನು ಕೊಡಬೇಕಾಗ
ತ್ತದೆ. ಕ್ಷೇಮನಿಧಿಯಿಂದ ವಂತಿಗೆದಾರರು ಮನೆಕಟ್ಟಲು, ಜೀ
ವಿಮೆ ಇಳಿಸಲು, ಸಹಕಾರಿ ಸಂಘಗಳನ್ನು ಸೇರಲು, ಅಲ್ಲದೆ ಮ
ಇನ್ನೂ ಕೆಲವು ಕಾರಣಗಳಿಗಾಗಿ ಹಣ ಪಡೆಯಬಹುದು. ವಂತಿ
ದಾರರು ಸತ್ತಾಗ ಅವರ ಆಶ್ರಿತರು ಅತೀಕಡಿಮೆಯೆಂದರೆ ರೂ
೫೦೦ನ್ನು ಪರಿಹಾರಧನವೆಂದು ಪಡೆಯುತ್ತಾರೆ.

(೩) ನೌಕರರ ಕ್ಷೇಮನಿಧಿ (1952) :

ವಿವಿಧ ವರ್ಗಗಳ ಜನರಿಗೆ ಸಹಾಯ ಸಲ್ಲಿಸುವ ಒಂದು ಬೃಹತ್ ಯೋಜನೆಯೆಂದರೆ ೧೯೫೨ ರಲ್ಲಿ ಪ್ರಾರಂಭಿಸಿದ ನೌಕರರ ಕ್ಷೇಮನಿಧಿ. ಮೊಟ್ಟ ಮೊದಲಿಗೆ ಕೇವಲ ಜವಳಿ, ಉಕ್ಕು ಮುಂತಾದ ಆರು ಉದ್ದಿಮೆಗಳ ಕ್ಷೇತ್ರದಲ್ಲಿ ಅನ್ವಯಿಸುತ್ತಿದ್ದ ಯೋಜನೆಯು ಸಧ್ಯ ೧೧೨ ಉದ್ದಿಮೆಗಳಿಗೆ ವಿಸ್ತರಿಸಿದೆ. ೫೧ ಲಕ್ಷ ಉದ್ಯೋಗಿಗಳು ವಂತಿಗೆ ಸಲ್ಲಿಸುತ್ತಿದ್ದಾರೆ. ೬% ದಿಂದ ೮% ವಂತಿಗೆಯನ್ನು ನೌಕರರು ಸಲ್ಲಿಸಿದರೆ ಅಷ್ಟನ್ನು ಮಾಲಿಕರೂ ಕೊಡುತ್ತಾರೆ. ಹೀಗೆ ಸಲ್ಲಿಸಿದ ನಿಧಿಯಿಂದ ನಿವೃತ್ತಿ ಅಥವಾ ಮರಣಾನಂತರ ವಂತಿಗೆದಾರನಿಗೆ ಅಥವಾ ಅವನ ವಾರಸುದಾರರಿಗೆ ಕ್ಷೇಮನಿಧಿಯನ್ನು ಕೊಡುತ್ತಾರೆ. ಎಷ್ಟೇ ಕಡಿಮೆ ವಂತಿಗೆ ಸಂದಾಯವಾಗಿದ್ದರೂ ೫೦೦ ರೂಪಾಯಿಯಷ್ಟನ್ನು ವಂತಿಗೆದಾರನ ವಾರಸುದಾರರಿಗೆ ಕೊಡುವ ಸೌಲಭ್ಯವಿದೆ.

(೪) ಮಾತೃತ್ವದ ಸೌಲಭ್ಯಗಳು (1923–1961) :

೧೯೨೩ ರಿಂದ ಈಚೆಗೆ ಸಾಧಾರಣವಾಗಿ ಎಲ್ಲಾ ರಾಜ್ಯ ಸರಕಾರಗಳು ಕೆಲಸ ಮಾಡುವ ತಾಯಂದಿರಿಗೆ ಭದ್ರತೆಯನ್ನೊದಗಿಸಲು ಅನೇಕ ಕಾಯ್ದೆಗಳನ್ನು ಜಾರಿಗೆ ತಂದಿವೆ. ಕೇಂದ್ರ ಸರಕಾರವು ೧೯೬೧ ರಲ್ಲಿ ಒಂದು ಕೇಂದ್ರ ಕಾಯ್ದೆಯನ್ನು ಜಾರಿಗೆ ತಂದು ಒಂದೇ ರೂಪದ ಪರಿಹಾರ ದರಗಳನ್ನು ರೂಪಿಸಿದೆ. ಇದರಿಂದಾಗಿ

ದುಡಿಯುವ ತಾಯಿಯು ಹೆರಿಗೆ-ಬಾಣಂತಿತನದ ದಿಸಗಳಲ್ಲಿಯೂ ಸಂಬಳ ಸೌಲಭ್ಯವನ್ನು ಪಡೆಯುವುದು ಸಾಧ್ಯವಾಗಿದೆ.

(೫) ವೃದ್ಧಾಪ್ಯ ಪಿಂಚಣಿ ಯೋಜನೆಗಳು :

ಪ್ರಪಂಚದ ಅನೇಕ ದೇಶಗಳಲ್ಲಿ ವೃದ್ಧರಿಗೆ ಭದ್ರತೆಯನ್ನು ಒದಗಿಸುವ ಯೋಜನೆಗಳಿವೆ. ಅವರಿಗೆ ಕೊಡುವ ಸಹಾಯದ ರೂಪಗಳು ಬೇರೆ ಬೇರೆಯಾಗಿರಬಹುದು. ಹಾಗೆಯೇ ವೃದ್ಧಾ-ಪ್ಯದ ವಯೋಮಿತಿಯೂ ಬೇರೆ ಬೇರೆಯಾಗಿರಬಹುದು. ಕೆಲವು ದೇಶಗಳಲ್ಲಿ ಆರ್ಥಿಕ ವರಮಾನ, ಅಂತಸ್ತುಗಳನ್ನು ನೋಡಿ ಪಿಂಚಣಿಯನ್ನು ನಿರ್ಧರಿಸುತ್ತಾರೆ. ಇನ್ನು ಕೆಲವೆಡೆಗಳಲ್ಲಿ ಎಲ್ಲರಿಗೂ ಸಮಾನಾದ ಮೊತ್ತವನ್ನು ಪಿಂಚಣಿಯಾಗಿ ಕೊಡಬಹುದು. ನಮ್ಮ ದೇಶದಲ್ಲಿಯೂ ಈಗ ವಿವಿಧ ರೀತಿಯ ಪಿಂಚಣಿ ಯೋಜನೆಗಳು ಜಾರಿಯಲ್ಲಿವೆ.

ಉತ್ತರ ಪ್ರದೇಶ, ಮದ್ರಾಸ್, ರಾಜಸ್ಥಾನ, ಕೇರಳ, ಪಂಜಾಬ, ಪಶ್ಚಿಮ ಬಂಗಾಳ, ಮೈಸೂರು ಇತ್ಯಾದಿ ರಾಜ್ಯಗಳು ವೃದ್ಧರ ಪಿಂಚಣಿ ಯೋಜನೆಗಳನ್ನು ಪ್ರಾರಂಭಿಸಿವೆ. ಮೈಸೂರಿನ ಯೋಜನೆ ೧೯೬೪ ರಲ್ಲಿ ಜಾರಿಗೆ ಬಂದಿತು. ಈ ಯೋಜನೆಯಂತೆ ಯಾವುದೇ ಆದಾಯ ಅಥವಾ ನೆರವಿಲ್ಲದ ಹಾಗೂ ೭೦ ವರ್ಷಕ್ಕೂ ಮಿಕ್ಕಿದ ವೃದ್ಧರಿಗೆ ರಾಜ್ಯ ಸರಕಾರವು ೧೫ ರೂಪಾಯಿಯ ಮಾಸಿಕ ವೇತನವನ್ನು ಕೊಡುತ್ತದೆ. ೧೯೬೪–೬೫ ರಲ್ಲಿ ಈ ಯೋಜನೆಗೆ ೨೦ ಲಕ್ಷ ರೂಪಾಯಿಗಳಷ್ಟು ಖರ್ಚಾಗುವ ನಿರೀಕ್ಷೆಯಿತ್ತು. ೭೦ ರ ಗಡಿಯನ್ನು ದಾಟಿದ ೫ ಲಕ್ಷ ಮುದುಕರ ಪೈಕಿ

೧೧ ಸಾವಿರ ಮುದುಕರು ಈ ಯೋಜನೆಯಂತೆ ಮಾಸಿಕ ವೇತನ ಪಡೆಯಬಹುದೆಂದು ಅಂದಾಜು ಮಾಡಲಾಗಿತ್ತು. (ಯೋಜನೆ ಅಯಶಸ್ವಿಯಾಯಿತು. ತೀರ ಇತ್ತೀಚೆಗೆ ರಾಜ್ಯ ಸರಕಾರವು ಈ ಯೋಜನೆಯನ್ನು ಕೈಬಿಟ್ಟಿದೆ). ಉತ್ತರ ಪ್ರದೇಶದಲ್ಲಿ ೬೫ ವರ್ಷ ಪ್ರಾಯವನ್ನು ದಾಟಿದ ಮುದುಕರು (ತಿಂಗಳಿಗೆ ಹತ್ತು ರೂಪಾಯಿಗೂ ಕಡಿಮೆ ಆದಾಯ ಇರುವವರು ಮಾತ್ರ) ಮಾಸಿಕ ಧನ ಸಹಾಯ ಪಡೆಯುತ್ತಾರೆ. ಹೀಗೆ ಬೇರೆ ಬೇರೆ ರಾಜ್ಯಗಳು ವೃದ್ಧಾಪ್ಯದಲ್ಲಿ ಊರುಗೋಲಾಗಲು ಪ್ರಯತ್ನಿಸುತ್ತಿವೆ.

(೬) ಸಾರ್ವಜನಿಕ ಕ್ಷೇಮನಿಧಿ (1968) :

ಇತ್ತೀಚೆಗೆ ಭಾರತ ಸರಕಾರವು ಹೊಸ ನಿಧಿಯೊಂದನ್ನು ಯೋಜಿಸಿದೆ. ಈ ನಿಧಿಗೆ ಯಾರೇ ಬೇಕಾದರೂ ಹಣ ಸಲ್ಲಿಸಬಹುದು. ಉಳಿದ ಕ್ಷೇಮ ನಿಧಿಗಳಂತೆ ಇದಕ್ಕೆ ಮತ್ತೊಬ್ಬರು ಸರಿಸಮ ವಂತಿಗೆ ಸಲ್ಲಿಸುವುದಿಲ್ಲ. ವಂತಿಗೆದಾರರು ವರ್ಷಕ್ಕೆ ರೂ. ೧೦೦ ರಿಂದ ರೂ. ೧೫೦೦೦ ತನಕ ವಂತಿಗೆ ಸಲ್ಲಿಸಬಹುದು. ಇತರ ಕ್ಷೇಮ ನಿಧಿಗಳಿಗೆ ಸಿಗುವ ಕರ ವಿನಾಯತಿ ಇದಕ್ಕೆ ಸಿಗುತ್ತದೆ. ಆದರೆ ಜೀವವಿಮೆಯ ಬೇರೆ ಸೌಲಭ್ಯಗಳು ಸಿಗುವುದಿಲ್ಲ. ಇದು ಬಡವರ ಕ್ಷೇಮ ನಿಧಿಯಲ್ಲ; ಕರ ತಪ್ಪಿಸುವ ಶ್ರೀಮಂತರಿಗಾಗಿ ಮಾಡಿದ ಕ್ಷೇಮನಿಧಿಯೆಂದು ಜನರು ಆಡಿಕೊಂಡಿದ್ದುಂಟು.

ಬರಲೇ ಬೇಕಾದ ಒಂದು ಮಹತ್ವದ ಯೋಜನೆ:
ನಿರುದ್ಯೋಗ ವಿಮೆ :

ವಿಶ್ವದ ಅನೇಕ ದೇಶಗಳಲ್ಲಿ ಈಗಾಗಲೇ ನಿರುದ್ಯೋಗ ವಿಮೆ ಜಾರಿಯಲ್ಲಿ ಬಂದಿದೆ. ನಮ್ಮ ಅತಿದೊಡ್ಡ ಸಮಸ್ಯೆಯಾದ ನಿರು-ದ್ಯೋಗವನ್ನು ಎದುರಿಸುವಲ್ಲಿ ಈ ವಿಮೆಯು ಅತಿ ಮಹತ್ವದ್ದಾಗಿದೆ. ಮುಂದುವರಿದ ರಾಷ್ಟ್ರಗಳಾದ ಇಂಗ್ಲೆಂಡ್ ಮತ್ತು ಅಮೇ-ರಿಕೆಗಳು ಕೆಲವೊಂದು ತರದ ನಿರುದ್ಯೋಗ ಸಂದರ್ಭಗಳಲ್ಲಿ ಜನರಿಗೆ ರಕ್ಷಣೆಯನ್ನು ನೀಡುತ್ತವೆ. ಉದ್ಯೋಗ ಸಿಗುವ ತನಕ ಗೊತ್ತು ಪಡಿಸಿದ ಪ್ರಮಾಣದಲ್ಲಿ ವ್ಯಕ್ತಿಗಳು ಸರಕಾರದಿಂದ ಸಹಾಯಧನ ಪಡೆಯುತ್ತಾರೆ. ಉದ್ಯೋಗ ದೊರೆತಮೇಲೆ ಅವರು ಅತ್ಯಲ್ಪ ಪ್ರಮಾಣದ ವಂತಿಗೆಯ ಹಣವನ್ನು ಪ್ರತಿತಿಂಗಳೂ ವಿಮೆಯಲ್ಲಿ ತೊಡಗಿಸುತ್ತಾರೆ. ಆರ್ಥಿಕ ಮುಗ್ಗಟ್ಟಿನಲ್ಲಿ ಹಾಗೂ ಉದ್ದಿಮೆಗಳು ದಿವಾಳಿಯಾದಾಗ ಅಥವಾ ವೈಯಕ್ತಿಕ ಕಾರಣಗಳಿಗಾಗಿ ದುಡಿಯಲು ಆಗದಾಗ ಈ ವಿಮಾಯೋಜನೆ ಅತ್ಯಂತ ಪ್ರಯೋ-ಜನಕಾರಿಯಾಗಿದೆ. ಭಾರತದಲ್ಲಿ ಇದನ್ನು ವ್ಯಾಪಕವಾಗಿ ಹಾಗೂ ಯಶಸ್ವಿಯಾಗಿ ಅನ್ವಯಿಸುವುದು ಕಷ್ಟದ ಕೆಲಸವೆಂಬುದು ನಿಜ. ಆದರೂ ಇಂತಹ ಯೋಜನೆಯನ್ನು ಕಲ್ಯಾಣರಾಜ್ಯವೆನ್ನಿಸಿಕೊಳ್ಳುವ ನಮ್ಮ ದೇಶವು ಪ್ರಾರಂಭಿಸಬೇಕೆಂಬುದೂ ಅಷ್ಟೇ ನಿಜ. ಉದ್ದಿಮೆಗಳು ಹೊರಗೀಲಿ ಹಾಕಿದಾಗ ಅಥವಾ ನೌಕರರನ್ನು ಕಡಿಮೆ ಮಾಡಿದಾಗ, ಕೆಲಸಗಾರರಿಗೆ ಪರಿಹಾರ ಒದಗಿಸಬೇಕೆಂದು ನಮ್ಮ ಔದ್ಯೋಗಿಕ ವಿವಾದ (ತಿದ್ದುಪಡಿ) ಕಾಯ್ದೆಯಲ್ಲಿ ಹೇಳ

ಲಾಗಿದೆ. ಆದರೆ ಇದನ್ನು ನಾವು ವಿಮಾಯೋಜನೆ ಎನ್ನಲಾರೆವು. ಸರ್ ಬೆವರಿಜ್ ಹೇಳುವಂತೆ "ದುಡಿಯಲು ಶಕ್ತರಿದ್ದಾಗ ಒಂದು ಉದ್ಯೋಗ; ಅಶಕ್ತರಿದ್ದಾಗ ಒಂದಿಷ್ಟು ಆದಾಯ" ಎಂಬುದೇ ಸಾಮಾಜಿಕ ಭದ್ರತೆಯ ತಿರುಳು. ಈ ದೃಷ್ಟಿಯಿಂದ ನೋಡಿದರೆ ನಿರುದ್ಯೋಗ ವಿಮೆಯು ಅತ್ಯವಶ್ಯವಾಗಿ ಬರಲೇ ಬೇಕಾದ ಒಂದು ಮಹತ್ವದ ಯೋಜನೆ.

ಬರಬಹುದಾದ ಯೋಜನೆಗಳು :

ಕೇಂದ್ರ ಸರಕಾರವು ಇತ್ತೀಚೆಗೆ ಎರಡು ಕೋಟಿ ರೂಪಾಯಿಯ ಕೊಡುಗೆಯೊಂದಿಗೆ ಕೇಂದ್ರ ಪರಿಹಾರ ಮತ್ತು ಸಹಾಯ ನಿಧಿಯೊಂದನ್ನು ಸ್ಥಾಪಿಸಲು ಯೋಜಿಸಿದೆ. ವೃದ್ಧರು, ನಿರ್ಗತಿಕರು, ಅಂಗವಿಕಲರು, ಹೆಂಗಸರು ಮತ್ತು ಮಕ್ಕಳು ಈ ನಿಧಿಯಿಂದ ರಕ್ಷಣೆ ಪಡೆಯಬಹುದು. ಕೇಂದ್ರದ ಮೂರುಪಾಲು ಬಂಡವಾಳಕ್ಕೆ ಸ್ಥಳೀಯ ಸಂಸ್ಥೆಗಳು ಒಂದು ಪಾಲನ್ನು ಕೊಡಬೇಕಾಗುವುದು. ಕೇಂದ್ರ ಸಮಾಜ ಕಲ್ಯಾಣ ಮಂಡಳಿ ಮುಂತಾದ ಸಂಸ್ಥೆಗಳ ಪ್ರತಿನಿಧಿಗಳು ಈ ನಿಧಿಯ ಆಡಳಿತ ಮಂಡಳಿಯಲ್ಲಿರುತ್ತಾರೆ. ಈ ಯೋಜನೆಯ ರೂಪರೇಷೆ ಇನ್ನೂ ಸಿದ್ಧವಾಗಬೇಕಷ್ಟೆ.

ಹೆಸರಿಸಬಹುದಾದ ಭವಿಷ್ಯತ್ತಿನ ಇನ್ನೊಂದು ಯೋಜನೆಯೆಂದರೆ ಪುಕ್ಕಟೆ ಕಾಯ್ದೆ ರಕ್ಷಣೆ. ಇದರನ್ವಯ ಎಲ್ಲ ಬಡವರೂ ಸಮರ್ಥ ವಕೀಲರ ಸೇವೆಯನ್ನು ಪುಕ್ಕಟೆಯಾಗಿ ಪಡೆಯಬಹುದು. ಇವರ ಇತಿಮಿತಿಗಳನ್ನೂ ಯಶಸ್ಸನ್ನೂ ಕಾದು ನೋಡಬೇಕು.

ನಮಗೆ ಭದ್ರತೆ ಇದೆಯೆ?

ಹೀಗೆ, ವಿಶ್ವದ ಇತರ ಕೆಲವು ದೇಶಗಳಲ್ಲಿಯಂತೆ ನಮ್ಮ ದೇಶದಲ್ಲಿಯೂ ಕೆಲವು ವಿಮಾಯೋಜನೆಗಳೂ, ಸಹಾಯ ವ್ಯವಸ್ಥೆಗಳೂ ಇವೆಯೆಂಬುದು ನಿಜ. ಆದರೆ ನಾವಿಲ್ಲಿ ಒಂದು ಪ್ರಶ್ನೆಯನ್ನು ಕೇಳುವುದು ಸೂಕ್ತ: ಈ ದೇಶದಲ್ಲಿ ನಮಗೆ ಬೇಕಾದ ಸಾಮಾಜಿಕ ಭದ್ರತೆ ಇದೆಯೆ? ಅನಾರೋಗ್ಯ, ನಿರುದ್ಯೋಗ, ವೃದ್ಧಾಪ್ಯ, ವೈಧವ್ಯ, ಸಾವು, ನೋವುಗಳನ್ನು ಎದುರಿಸುವಲ್ಲಿ ನಮಗೆ ಬೇಕಾದ ರಕ್ಷಣೆ ಸಿಗುತ್ತದೆಯೇ ಹೇಗೆ? ಈ ಪ್ರಶ್ನೆಗೆ ಸಿಗುವ ಉತ್ತರ ಸರ್ವವಿದಿತವಾದದ್ದೇ ಇದೆ – ಅಂತಹ ರಕ್ಷಣೆ ಈ ದೇಶದಲ್ಲಿ ಇನ್ನೂ ಲಭ್ಯವಾಗಿಲ್ಲ. ನಮ್ಮ ಜೀವನ ಒಂದಿಷ್ಟೂ ಭದ್ರವಾಗಿಲ್ಲ. ನಮ್ಮ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಕೆಲವರಿಗೆ ಮಾತ್ರ ಸಧ್ಯ ಅಲ್ಪಸ್ವಲ್ಪ ಭದ್ರತೆಯ ಸೌಲಭ್ಯಗಳು ಸಿಗುತ್ತಿವೆ. ಕಾರಖಾನೆ, ಕಚೇರಿ ಮತ್ತು ಗಣಿಗಳಲ್ಲಿರುವ ಸುಸಂಘಟಿತರಾಗಿರುವ ಕೆಲಸಗಾರರು ಮಾತ್ರ ಈ ಸುದೈವಿಗಳು. ಆದರೆ ನಮ್ಮ ದೇಶದ ಬೆನ್ನೆಲುಬಾಗಿರುವ ರೈತರಿಗೆ ಈ ಸೌಲಭ್ಯಗಳಿಲ್ಲ. ಹಾಗೆಯೇ ಗುಡಿ ಕೈಗಾರಿಕೆಗಳನ್ನು ಅವಲಂಬಿಸಿರುವ ಲಕ್ಷಾವಧಿ ಜನರು, ಕುಶಲ ಕರ್ಮಿಗಳು, ಕಿರುಕುಳ ವ್ಯಾಪಾರ ಮತ್ತು ಸ್ವತಂತ್ರ ಉದ್ಯೋಗ ನಡೆಸುವ ಲಕ್ಷಾವಧಿ ಪ್ರಜೆಗಳು ಯಾವ ಭದ್ರತೆಗಳನ್ನೂ ಹೊಂದಿಲ್ಲ. ನಾವು ನಮ್ಮ ರಾಷ್ಟ್ರೀಯ ವರಮಾನದ ನೂರರಲ್ಲಿ ಒಂದು ಭಾಗವನ್ನೂ ಪ್ರಜೆಗಳ ಸಾಮಾಜಿಕ ಭದ್ರತೆಗಾಗಿ ವೆಚ್ಚ ಮಾಡುತ್ತಿಲ್ಲ. ವಿಶ್ವದ ಅನೇಕ ದೇಶಗಳು ಇದಕ್ಕಿಂತ ಹತ್ತಿಪ್ಪತ್ತು ಪಟ್ಟು ವಿನಿ

ಯೋಗಿಸುತ್ತಿರುವಾಗ ನಮ್ಮ ದೇಶವು ಕಲ್ಯಾಣ ರಾಷ್ಟ್ರ ಹೇಗಾದೀತು ಎಂಬ ಸಂದೇಹ ಮೂಡುತ್ತದೆ.

ಇಲ್ಲಿ ಒಂದೆರಡು ಸಂಗತಿಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಒಂದು ದೊಡ್ಡ ಸಮಸ್ಯೆಯೆಂದರೆ ಎಲ್ಲ ಅಭಿವೃದ್ಧಿ ಯೋಜನೆಗಳಿಗೂ ಬೇಕಾಗುವ ಹಣ ಸಿಗುವುದಿಲ್ಲ. ಅಲ್ಲದೆ, ಏಕಕಾಲಕ್ಕೆ ಸಾಕ್ಷರತೆ, ವಿದ್ಯಾಭ್ಯಾಸ, ಗ್ರಾಮಾಭ್ಯುದಯ, ಸಮಾಜ ಕಲ್ಯಾಣ, ಸಾಮಾಜಿಕ ಆರೋಗ್ಯ ಮೊದಲಾದ ವಿಷಯಗಳು ಅಗ್ರಪ್ರಾಶಸ್ತ್ಯಕ್ಕಾಗಿ ಸ್ಪರ್ಧಿಸುತ್ತವೆ. ಇವುಗಳಲ್ಲಿ ಯಾವುದನ್ನೂ ನಿರ್ಲಕ್ಷ್ಯಿಸುವಂತಿಲ್ಲ. ಹೀಗೆ ಭಾರತದಂತಹ ದೇಶಗಳಿಗೆ ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳು ತಲೆಭಾರವಾಗಿ ಪರಿಣಮಿಸಬಹುದು. ಈ ಕಾರಣಗಳಿಗಾಗಿಯೇ ಕೆಲವರು ಇವುಗಳನ್ನು ರಾಷ್ಟ್ರೀಯ ದುಂದುಗಾರಿಕೆಯೆಂದು ಭಾವಿಸಿದ್ದಾರೆ. ರಾಷ್ಟ್ರೀಯ ಆದಾಯ ಹೆಚ್ಚುತ್ತಾ ಹೋದಂತೆ ಎಲ್ಲವೂ ತನ್ನಿಂದ ತಾನೆ ಸುಧಾರಿಸುವುದೆಂದೂ ಅಲ್ಲಿಯ ತನಕ ಈ ಕಾರ್ಯಕ್ರಮಗಳಿಗಾಗಿ ದುಂದು ಮಾಡಬಾರದೆಂದೂ ಇವರು ಅಭಿಪ್ರಾಯಪಡುತ್ತಾರೆ. ಇವರ ವಾದವು ಖಚಿತವಾಗಿ ತಪ್ಪು. ಎಂದಿಗಿಂತ ಈಗ ಸಾಮಾಜಿಕ ಭದ್ರತೆಗಳ ಆವಶ್ಯಕತೆ ಹೆಚ್ಚಾಗಿದೆ. ರಾಷ್ಟ್ರೀಯ ಬೆಳವಣಿಗೆಯಲ್ಲಿ ಜನರು ಪಾಲುಗೊಳ್ಳಲು ಅವು ಬೇಕೇ ಬೇಕು. ನಮ್ಮ ಭದ್ರತೆಯ ಗುರಿ ಅತಿ ಕಷ್ಟದ್ದೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಅದು ಇಷ್ಟವೂ ಹೌದು. ನಮ್ಮ ಪ್ರಾಚೀನರು ಹೀಗೆ ಕನಸು ಕಂಡಿದ್ದರು –

ಸರ್ವೇಽಪಿ ಸುಖಿನಃ ಸಂತು । ಸರ್ವೇ ಸಂತು ನಿರಾಮಯಾ
ಸರ್ವೇ ಭದ್ರಾಣಿ ಪಶ್ಯಂತು । ಮಾ ದುಃಖಂ ಕಶ್ಚಿದಾಪ್ನು
ಯಾತ

(ಎಲ್ಲರೂ ಸುಖವಾಗಿರಲಿ; ಎಲ್ಲರೂ ಆರೋಗ್ಯವಾಗಿರಲಿ ಭದ್ರವಾದ ಭವಿಷ್ಯವನ್ನು ಕಾಣಲಿ; ಎಲ್ಲರೂ ದುಃಖದಿಂದ ದೂರ ವಿರಲಿ.)

ಬಹು ಹತ್ತಿರದ ಭವಿಷ್ಯತ್ತಿನಲ್ಲಿ ಇದು ಸಾಧ್ಯವಾಗಲೆಂದು ಹಾರೈಸೋಣ.

ಉಪಯುಕ್ತವಾದ ಕೆಲವು ಕಿರು ಹೊತ್ತಿಗೆಗಳು

1. Moorthy, B. M. L — Social Security in India (Popular, 1954)
2. Mitchell, W. L — Social Security in America (Vora & Co, 1970)
3. Schottland, Charles — The Social Security Programme in the United States (Higginbothams, 1963)
4. Lydia Lykova — Social Security in the U. S. S. R. (Novosti Press, 1969)
5. Mamoria. C. B. — Principles of Social Security (Kitab Mahal, 1965)
6. ಮರುಳಸಿದ್ಧಯ್ಯ, ಎಚ್. ಎಂ. — ಇದೂ ನಮ್ಮ ಸಮಾಜ (ಅ. 5) (ಸನ್ಮಿತ್ರ ಪ್ರಕಾಶನ, 1965)

ಈ ಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧. ಪ್ರಾಚೀನ ಕರ್ನಾಟಕದ ಶಿಕ್ಷಣ ಕ್ರಮ —ಜಿ. ಎಸ್. ದೀಕ್ಷಿತ
೨. ತಮಿಳು ಶಿವಭಕ್ತೆ ಕಾರೈಕಾಲಮ್ಮೆ —ಎಂ. ಎಸ್. ಲಕ್ಷ್ಮೆ
೩. ಜಾನಪದ ವೀರಗೀತೆಗಳು —ಬಿ. ಬಿ. ಮಹೀಶವಾಡಿ
೪. ಕಸದಿಂದ ರಸೋತ್ಪತ್ತಿ —ಸಂಜೀವರಾವ ಕಲ್ಲಾಪುರ
೫. ವಚನಕಾರ ದೇವರ ದಾಸಿಮಯ್ಯ —ಎಸ್. ಎಸ್. ಬಾಣದ
೬. ಭಾರತದ ಪ್ರಾಚೀನ ನಾಣ್ಯಗಳು —ಎ. ಎಂ. ಅಣ್ಣಿಗೇರಿ
೭. ಗಳಗನಾಥರ ಕಾದಂಬರಿಗಳು —ಕೃಷ್ಣಮೂರ್ತಿ ಕಿತ್ತೂರ
೮. ಯೋಜನೆಗಳು ಹಾಗು ಗ್ರಾಮೋದ್ಯೋಗಗಳು —ಶ್ಯಾ. ಬಿ. ಅಂಗಡಿ
೯. ಮಾನವ ವಿಜ್ಞಾನ ಹಾಗು ಆಧುನಿಕ ಭಾರತ —ಎಲ್. ಎಸ್. ಐನಾಪುರ
೧೦. ಹಳ್ಳಿಗರೇಳ್ಗೆ ಸಾಧಿಸುವ ಬಗೆ —ಬಿ. ಆರ್. ಪಾಟೀಲ

ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೩